1. ಸಂತಾಪ ಸೂಚನೆ

ವಿಷಯ : ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ಗೋವಿಂದ ನಾರಾಯಣ, ಹಾಗೂ ಮತ್ತಿತರ ನಿಧನದ ಬಗ್ಗೆ

ಸಭಾಧ್ಯಕ್ಷರು :

ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ಗೋವಿಂದ ನಾರಾಯಣ, ಮಾಜಿ ಸಚಿವರಾಗಿದ್ದ ಶ್ರೀಯುತ ಕೆ.ಎಂ. ಕೃಷ್ಣಾರೆಡ್ಡಿ, ಕೆ. ಶ್ರೀರಾಮುಲು ಮತ್ತು ಸುಭಾಷ್ ಅಷ್ಟೂರೆ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಎಂ.ನಾಗಪ್ಪ, ಸ್ವಾತಂತ್ಯ ಹೋರಾಟಗಾರ್ತಿ ಶ್ರೀಮತಿ ಜಿ.ಸಿ. ಭಾಗೀರಥಮ್ಮ. ಎಸ್.ಮುನಿ ಶ್ಯಾಮಪ್ಪ, ಎಂ.ಹೆಚ್.ಬೆಕಿನಾಳಕರ, ಕೆ.ಜಿ. ಮಹೇಶ್ವರಪ್ಪ, ಸ್ವಾತಂತ್ಯ ಹೋರಾಟಗಾರ ಬಿ.ವಿ. ಕಕ್ಕಿಲ್ಲಾಯ, ನೀಲಕಂಠನಗೌಡ ವೀರನಗೌಡ ಪಾಟೀಲ್, ಎಂ.ಗಂಗಣ್ಣ ಭೀಮಪ್ಪ ಹಾಗೂ ಸಂಸತ್‌ನ ಮಾಜಿ ಸದಸ್ಯರಾಗಿದ್ದ ಕೆ.ಜಿ. ಶಿವಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಗೋವಿಂದ ನಾರಾಯಣ

ಶ್ರೀ ಗೋವಿಂದ ನಾರಾಯಣ ಅವರು ದಿನಾಂಕ 5ನೇ ಮೇ 1916 ರಂದು ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವೀಧರರಾಗಿದ್ದರು. ಬ್ರಿಟನ್ ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿರುವ ದಿವಂಗತರು ಐಸಿಎಸ್ ಪದವಿಯನ್ನು ಪಡೆದುಕೊಂಡಿದ್ದರು. ಉತ್ತರ ಪ್ರದೇಶದ ಗೃಹ ಕಾರ್ಯದರ್ಶಿಯಾಗಿ, ಅಭಿವೃದ್ಧಿ ಆಯುಕ್ತರಾಗಿ ಮತ್ತು ಆ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ. 1951 ರಿಂದ 1954ರವರೆಗೆ ನೇಪಾಳ ರಾಜರಿಗೆ ಆಪ್ತ ಸಲಹೆಗಾರರಾಗಿ, 1964ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಸರ್ಕಾರದ ಸಂಪರ್ಕಾಧಿಕಾರಿಯಾಗಿ, 1973 ರಲ್ಲಿ ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ.

ಶ್ರೀ ಗೋವಿಂದ ನಾರಾಯಣ ಅವರು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದು 1977ರಿಂದ 1983ರವರೆಗೆ ಕರ್ನಾಟಕ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀ ಗೊಂವಿಂದ ನಾರಾಯಣ ಅವರು ದಿನಾಂಕ 03.04.2012ರಂದು ನಿಧನ ಹೊಂದಿರುತ್ತಾರೆ.

2. ಕೆ. ಎಂ. ಕೃಷ್ಣಾರೆಡ್ಡಿ

ರಾಜ್ಯದ ಮಾಜಿ ಸಚಿವರು ಮತ್ತು ಜನತಾ ಪರಿವಾರದ ನಾಯಕರಾಗಿದ್ದ ಶ್ರೀ ಕೆ.ಎಂ.ಕೃಷ್ಣಾರೆಡ್ಡಿ ಅವರು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಮುದಿರೆಡ್ಡಿ ಗಾರಪಲ್ಲಿಯಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿ ಹಾಗೂ ಕೃಷಿಕರಾಗಿದ್ದರು. ವಿದ್ಯಾರ್ಥಿ ಸಂಘಗಳ ನಾಯಕರಾಗಿದ್ದರು. ಸುಮಾರು ಹತ್ತು ವರ್ಷಗಳ ಕಾಲ ಚಿಂತಾಮಣಿಯಲ್ಲಿ ನ್ಯಾಯವಾದಿಯಾಗಿ ಕೆಲಸ ಮಾಡಿರುತ್ತಾರೆ.

1985 ರಲ್ಲಿ ಜನತಾ ಪಕ್ಷದಿಂದ ಮತ್ತು 1994 ರಲ್ಲಿ ಜನತಾದಳದಿಂದ ಚಿಂತಾಮಣಿ ವಿಧಾನಸಭಾ ಕ್ಷೇತ್ರದಿಂದ ಕ್ರಮವಾಗಿ 8 ಮತ್ತು 10ನೇ ವಿಧಾನಸಭೆಗೆ ಚುನಾಯಿತರಾಗಿದ್ದರಲ್ಲದೆ ದಿನಾಂಕ 30.06.1986 ರಿಂದ 27.04.1987 ರವರೆಗೆ ರೇಷ್ಮೆ , ಪಶುಸಂಗೋಪನೆ ಮತ್ತು ಮೀನುಗಾರಿಕಾ ಸಚಿವರಾಗಿ ಮತ್ತು 1989 ರಲ್ಲಿ ಗೃಹ ಸಚಿವರಾಗಿ ಹಾಗೂ ದಿನಾಂಕ 06.06.1996 ರಿಂದ 10.10.1999ರ ವರೆಗೆ ಸಮಾಜ ಕಲ್ಯಾಣ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ ಅವರು ದಿನಾಂಕ 31.3.2012 ರಂದು ನಿಧನಹೊಂದಿರುತ್ತಾರೆ.

3. ಕೆ. ಶ್ರೀರಾಮುಲು

ಸ್ವಾತಂತ್ರ್ಯ ಹೋರಾಟಗಾರಾಗಿದ್ದ ಶ್ರೀ ಕೆ.ಶ್ರೀರಾಮುಲು ಅವರು 1919 ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದು ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದ್ದರು. ವೃತ್ತಿಯಲ್ಲಿ ಸಮಾಜಸೇವಕರು ಪ್ರವೃತ್ತಿಯಲ್ಲಿ ಕಾರ್ಮಿಕ ಮುಖಂಡರಾಗಿದ್ದರು. ದಿವಂಗತರು 1941ರಲ್ಲಿ ಕಾರ್ಮಿಕ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಆರು ತಿಂಗಳ ಕಾಲ, 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸುಮಾರು ಎರಡು ವರ್ಷ ಹಾಗೂ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸುಮಾರು ಮೂರು ತಿಂಗಳುಗಳ ಕಾಲ ಸೆರೆಮನೆ ವಾಸ ಅನುಭವಿಸಿದ್ದರು.

ದಿವಂಗತರು 1972ರಲ್ಲಿ ಗಾಂಧೀನಗರ ಕ್ಷೇತ್ರದಿಂದ 5ನೇ ವಿಧಾನಸಭೆಗೆ ಚುನಾಯಿತರಾಗಿದ್ದರಲ್ಲದೆ ಶ್ರೀಮಾನ ದೇವರಾಜ್ ಅರಸುರವರ ಸಂಪುಟದಲ್ಲಿ

1976 ರಿಂದ 1978 ರವರೆಗೆ ರೇಷ್ಮೆ ಮತ್ತು ಮೀನುಗಾರಿಕಾ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಕೆ. ಶ್ರೀರಾಮುಲು ಅವರು ದಿನಾಂಕ 21.6.2012 ರಂದು ನಿಧನಹೊಂದಿರುತ್ತಾರೆ.

4. ಎಂ. ನಾಗಪ್ಪ

ಶ್ರೀ ಎಂ. ನಾಗಪ್ಪ ಅವರು ದಿನಾಂಕ 05.02.1948ರಲ್ಲಿ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಎಲ್ಲಪ್ಪನಾಯಕನಹಳ್ಳಿಯಲ್ಲಿ ಜನಿಸಿರುತ್ತಾರೆ. ದಿವಂಗತರು ತಾಂತ್ರಿಕ ಶಿಕ್ಷಣವನ್ನು ಪಡೆದಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ತಾಲ್ಲೂಕು ಕಿಸಾನ್‌ಸಭಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರಲ್ಲದೆ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಶ್ರಮಿಸಿರುತ್ತಾರೆ.

ಎಂ. ನಾಗಪ್ಪ ಅವರು 1978 ರಲ್ಲಿ ಪಾವಗಡ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಆಯ್ಕೆಗೊಂಡು ಕಾರ್ಯನಿರ್ವಹಿಸಿರುತ್ತಾರೆ.

ಎಂ.ನಾಗಪ್ಪ ಅವರು ದಿನಾಂಕ 20.04.2012 ರಂದು ನಿಧನಹೊಂದಿರುತ್ತಾರೆ.

5. ಜಿ. ಸಿ. ಭಾಗೀರಥಮ್ಮ

ಸ್ವಾತಂತ್ರ್ಯ ಹೋರಾಟಗಾರ್ತಿ ಶ್ರೀಮತಿ ಭಾಗೀರಥಮ್ಮ ಅವರು ದಿನಾಂಕ 02.02.1922 ರಂದು ತುಮಕೂರಿನಲ್ಲಿ ಜನಿಸಿದ್ದು ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ವೃತ್ತಿಯಲ್ಲಿ ಶಿಕ್ಷಕಿಯಾಗಿ ಹಾಗೂ ಪ್ರವೃತ್ತಿಯಲ್ಲಿ ಸಮಾಜಸೇವಕಿಯಾಗಿದ್ದರು. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಸುಮಾರು ಒಂದೂವರೆ ವರ್ಷಗಳ ಕಾಲ ಸೆರೆಮನೆ ವಾಸ ಅನುಬವಿಸಿದ್ದರಲ್ಲದೆ ಭಾರತಕ್ಕೆ ಸ್ವಾತಂತ್ರ್ಯ ದೊರಕಬೇಕೆಂದು ಹೋರಾಡಿ ಸುಮಾರು ನಾಲ್ಕು ಬಾರಿ ಸೆರೆಮನೆ ವಾಸ ಅನುಭವಿಸಿರುತ್ತಾರೆ. 1960 ರಿಂದ ಸತತವಾಗಿ 18 ವರ್ಷಗಳ ಕಾಲ ಕರ್ನಾಟಕ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಮತಿ ಭಾಗೀರಥಮ್ಮ ಅವರು 1962 ರಲ್ಲಿ ತುಮಕೂರು ವಿಧಾನಸಭಾ ಕ್ಷೇತ್ರದಿಂದ 3ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಮತಿ ಜಿ.ಸಿ.ಭಾಗೀರಥಮ್ಮ ಅವರು ದಿನಾಂಕ 22.04.2012 ರಂದು ನಿಧನ ಹೊಂದಿರುತ್ತಾರೆ.

6. ಎಸ್. ಮುನಿಶ್ಯಾಮಪ್ಪ

ಶ್ರೀ ಎಸ್. ಮುನಿಶ್ಯಾಮಪ್ಪ ಅವರು ದಿನಾಂಕ 18.11.1936 ರಲ್ಲಿ ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಆನೆಮಡಗು ಗ್ರಾಮದಲ್ಲಿ ಜನಿಸಿದ್ದು, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ದಿವಂಗತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1966 ರಿಂದ 1976ರ ವರೆಗೆ ಆನೆಮಡಗು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿಯೂ ಸಹ ದಿವಂಗತರು ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 6,8 ಮತ್ತು 12ನೇ ವಿಧಾನಸಭೆಗೆ ಕ್ರಮವಾಗಿ 1978, 1985 ಹಾಗೂ 2004 ರಲ್ಲಿ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಮುನಿಶ್ಯಾಮಪ್ಪ ಅವರು ದಿನಾಂಕ 23.4.2012 ರಂದು ನಿಧನ ಹೊಂದಿರುತ್ತಾರೆ.

7. ಎಂ. ಹೆಚ್. ಬೆಕಿನಾಳಕರ

ಶ್ರೀ ಎಂ. ಹೆಚ್. ಬೆಕಿನಾಳಕರ ಅವರು ದಿನಾಂಕ 08.04.1933 ರಂದು ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಬೆಕಿನಾಳ ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ಸಮಾಜಸೇವಕರಾಗಿದ್ದರಲ್ಲದೆ ಪ್ರವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. ಡಿ.ಸಿ.ಸಿ. ಬ್ಯಾಂಕ್ ಪ್ರಧಾನ ಕಾರ್ಯದರ್ಶಿಯಾಗಿ. ಅಂಜೀಮನ್-ಇ-ಇಸ್ಲಾಂ ಸಂಸ್ಥೆಯ ಸಂಸ್ಥಾಪಕ ಸದಸ್ಯರಾಗಿ, ಕರ್ನಾಟಕ ರಾಜ್ಯ ಸಾರಿಗೆ ನೌಕರರ ಸಂಘದ ಅಧ್ಯಕ್ಷರಾಗಿ ಮತ್ತು ಬಿಜಾಪುರ ಜಿಲ್ಲಾ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿಯೂ ಸಹ ದಿವಂಗತರು ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಎಂ.ಹೆಚ್, ಬೆಕಿನಾಳಕರ ಅವರು 1978 ರಲ್ಲಿ 6ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಎಂ.ಹೆಚ್.ಬೆಕಿನಾಳಕರ ಅವರು ದಿನಾಂಕ 20.05.2012 ರಂದು ನಿಧನ ಹೊಂದಿರುತ್ತಾರೆ.

8. ಕೆ. ಜಿ. ಮಹೇಶ್ವರಪ್ಪ

ಶ್ರಿ ಕೆ.ಜಿ.ಮಹೇಶ್ವರಪ್ಪ ಅವರು ದಿನಾಂಕ 26.04.1928 ರಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾಧಿಯಾಗಿ ಮತ್ತು

ಪ್ರವೃತ್ತಿಯಲ್ಲಿ ಸಮಾಜಸೇವಕರಾಗಿದ್ದರು. ಸಮಾಜವಾದಿ ಚಿಂತಕ ರಾಮ ಮನೋಹರ ಲೋಹಿಯಾ ಅವರ ಅನುಯಾಯಿ ಆಗಿದ್ದ ಶ್ರೀ ಮಹೇಶ್ವರಪ್ಪ ಅವರು ಶಾಂತವೇರಿ ಗೋಪಾಲಗೌಡರ ಶಿಷ್ಯರಾಗಿದ್ದರು.

ದಿವಂಗತರು ಸಂಡೂರು ಭೂಸುಧಾರಣಾ ಹೋರಾಟದಲ್ಲಿ ಭಾಗವಹಿಸಿದ್ದರು. 1965ರಿಂದ 1970ರವರೆಗೆ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರಾಗಿದ್ದರು. 1983 ರಲ್ಲಿ ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ 7ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದ ದಿವಂಗತರು 1986 ರಿಂದ 1992 ರವರೆಗೆ ರಾಜ್ಯಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಕೆ.ಜಿ. ಮಹೇಶ್ವರಪ್ಪ ಅವರ ನಿಧನದಿಂದ ರಾಜ್ಯವು ಒಬ್ಬ ಸಮಾಜವಾದಿ ಚಿಂತಕನನ್ನು ಕಳೆದುಕೊಂಡಂತಾಗಿದೆ.

ಶ್ರೀ ಕೆ.ಜಿ.ಮಹೇಶ್ವರಪ್ಪ ಅವರು ದಿನಾಂಕ 03.06.2012 ರಂದು ನಿಧನ ಹೊಂದಿರುತ್ತಾರೆ.

9. ಬಿ. ವಿ. ಕಕ್ಕಿಲ್ಲಾಯ

ಶ್ರೀ ಬಿ.ವಿ. ಕಕ್ಕಿಲ್ಲಾಯ ಅವರು ದಿನಾಂಕ 11.11.1919 ರಂದು ಕಾಸರಗೋಡು ತಾಲ್ಲೂಕು ಬೇವಿಂಜೆಯಲ್ಲಿ ಜನಿಸಿದ್ದು ಬಿ.ಎ.ಪದವೀಧರರಾಗಿ–ದ್ದರಲ್ಲದೆ ವೃತ್ತಿಯಲ್ಲಿ ಕೃಷಿಕರಾಗಿದ್ದರು. ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ ದಿವಂಗತರು 1942 ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಸೆರಮನೆ ವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಸುಮಾರು ಆರು ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದ್ದಲ್ಲದೆ ಕರ್ನಾಟಕ ಏಕೀಕರಣಕ್ಕಾಗಿ ಹಾಗೂ ಗೋವಾ ವಿಮೋಚನಾ ಚಳುವಳಿಯಲ್ಲಿಯೂ ಸಹ ಭಾಗವಹಿಸಿದ್ದರು.

ರಾಜ್ಯದಲ್ಲಿ ಸಿಪಿಐ ಪಕ್ಷವನ್ನು ಕಟ್ಟಿ ಬೆಳೆಸಿದ ಕಮ್ಯುನಿಷ್ಟ್‌ನ ಹಿರಿಯ ನಾಯಕರಾಗಿದ್ದ ದಿವಂಗತರು 1952 ರಲ್ಲಿ ಮದ್ರಾಸ್ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1972 ರಲ್ಲಿ ಬಂಟ್ವಾಳ ಕ್ಷೇತ್ರದಿಂದ 5ನೇ ವಿಧಾನಸಭೆಗೆ ಚುನಾಯಿತರಾಗಿ ಕಾರ್ಯನಿರ್ವಹಿಸಿದ್ದಲ್ಲದೆ 1978 ರಲ್ಲಿ ವಿಟ್ಲ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಪುನರಾಯ್ಕೆಗೊಂಡಿದ್ದರು.

ದಿವಂಗತ ಕಕ್ಕಿಲಾಯ ಅವರ ನಿಧನದಿಂದ ರಾಜ್ಯವು ಒಬ್ಬ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡಂತಾಗಿದೆ.

ಶ್ರೀ ಬಿ.ವಿ. ಕಕ್ಕಿಲ್ಲಾಯ ಅವರು ದಿನಾಂಕ 04.06.2012 ರಂದು ನಿಧನ ಹೊಂದಿರುತ್ತಾರೆ.

10. ನೀಲಕಂಠನಗೌಡ ವೀರನಗೌಡ ಪಾಟೀಲ್

ಶ್ರೀ ನೀಲಕಂಠನಗೌಡ ವೀರನಗೌಡ ಪಾಟೀಲ್ ಅವರು ಶಿಗ್ಗಾವಿ ತಾಲ್ಲೂಕಿನ ಮೂಡ್ಲಿಯಲ್ಲಿ ಜನಿಸಿರುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದ ದಿವಂಗತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶಿಗ್ಗಾವಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ದಾಂಡೇಲಿಯ ಸಹಕಾರ ಸಂಘದ ಅಧ್ಯಕ್ಷರಾಗಿ, ಮಲೆನಾಡು ಗ್ರಾಮೀಣ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಮತ್ತು ಧಾರವಾಡದ ಕರ್ನಾಟಕದ ಕೇಂದ್ರೀಯ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಹುಬ್ಬಳ್ಳಿಯ ಕೃಷಿ ಮಾರುಕಟ್ಟೆ ಸಮಿತಿಯ ಸದಸ್ಯರಾಗಿಯೂ ಸಹ ದಿವಂಗತರು ಸೇವೆ ಸಲ್ಲಿಸಿರುತ್ತಾರೆ.

ಶ್ರೀ ನೀಲಕಂಠನಗೌಡ ವೀರನಗೌಡ ಪಾಟೀಲ್ ಅವರು 1983 ರಲ್ಲಿ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ 8ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ನೀಲಕಂಠನಗೌಡ ವೀರನಗೌಡ ಪಾಟೀಲ್ ಅವರು ದಿನಾಂಕ 07–07.2012 ರಂದು ನಿಧನ ಹೊಂದಿರುತ್ತಾರೆ.

11. ಸುಭಾಷ್ ಅಷ್ಟೂರೆ

ಶ್ರೀ ಸುಭಾಷ್ ಅಷ್ಟೂರೆ ಅವರು ದಿನಾಂಕ 10.08.1940 ರಂದು ಜನಿಸಿದ್ದು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದ ದಿವಂಗತರು ಬೀದರ್ ಜಿಲ್ಲೆಗೆ ನೀರಾವರಿ ಸೌಲಭ್ಯ ಕಲ್ಪಿಸಿದ ಧೀಮಂತ ನಾಯಕರಾಗಿದ್ದರು.

ಶ್ರೀ ಸುಭಾಷ್ ಅಷ್ಟೂರೆ ಅವರು 1972 ರಲ್ಲಿ ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡಿದ್ದರಲ್ಲದೆ 1974 ರಿಂದ 1977ರವರೆಗೆ ರಾಜ್ಯದ ಸಣ್ಣ ಮತ್ತು ಮಧ್ಯಮ ನೀರಾವರಿ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಸುಭಾಷ್ ಅಷ್ಟೂರೆ ಅವರು ದಿನಾಂಕ 10.07.2012 ರಂದು ನಿಧನ ಹೊಂದಿರುತ್ತಾರೆ.

12. ಎಂ. ಗಂಗಣ್ಣ ಭೀಮಪ್ಪ

ಶ್ರೀ ಎಂ ಗಂಗಣ್ಣ ಭೀಮಪ್ಪ ಅವರು ದಿನಾಂಕ 05–05–1951 ರಂದು ರಾಯಚೂರಿನಲ್ಲಿ ಜನಿಸಿದ್ದು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ

ಕೃಷಿಕರು ಮತ್ತು ಪ್ರವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. ಹಲವಾರು ಸಂಘ ಸಂಸ್ಥೆಗಳ ತಾಲ್ಲೂಕು ಮಂಡಳಿಗಳ ಮತ್ತು ಸಹಕಾರ ಸಂಘಗಳ ಸದಸ್ಯರು ಹಾಗೂ ಅಧ್ಯಕ್ಷರಾಗಿ ದಿವಂಗತರು ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ವಿಶೇಷವಾಗಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಏಳಿಗೆಗಾಗಿ ಶ್ರಮಿಸುತ್ತಿದ್ದರು.

ದಿವಂಗತರು 1978ರಲ್ಲಿ ಕುಷ್ಟಗಿ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀ ಎಂ.ಗಂಗಣ್ಣ ಭೀಮಪ್ಪ ಅವರು ದಿನಾಂಕ 12.07.2012 ರಂದು ನಿಧನ ಹೊಂದಿರುತ್ತಾರೆ.

13. ಕೆ. ಜಿ. ಶಿವಪ್ಪ

ಶ್ರೀ ಕೆ.ಜಿ.ಶಿವಪ್ಪ ಅವರು ದಿನಾಂಕ 30.5.1943 ರಲ್ಲಿ ಶಿವಮೊಗ್ಗ ಜಿಲ್ಲೆ ವಿಲ್ ಕೊಡಕ್ಕಿಯಲ್ಲಿ ಜನಿಸಿದ್ದು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು.

ಶ್ರೀ ಶಿವಪ್ಪ ಅವರು 1991 ರಲ್ಲಿ ಶಿವಮೊಗ್ಗ ಕ್ಷೇತ್ರದಿಂದ 13ನೇ ಲೋಕಸಭೆಗೆ ಚುನಾಯಿತರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀ ಶಿವಪ್ಪ ಅವರು ದಿನಾಂಕ 22.05.2012 ರಂದು ನಿಧನ ಹೊಂದಿರುತ್ತಾರೆ.

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಗಳು ಸಂತಾಪ ಸೂಚನೆ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಿಂದ ಇಲ್ಲಿಯವರೆಗೆ ಈ ವಿಧಾನ ಮಂಡಲದಲ್ಲಿ ಮಾನ್ಯ ಸದಸ್ಯರಾಗಿ ಮತ್ತು ಮಾನ್ಯ ಮಂತ್ರಿಗಳಾಗಿ ಕೆಲಸ ಮಾಡಿದಂತಹ ಹಾಗೂ ಇನ್ನಿತರ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ನಿಧನ ಹೊಂದಿದ್ದು, ಅದಕ್ಕಾಗಿ ತಾವೇನು ಸಂತಾಪ ಸೂಚನೆ ನಿರ್ಣಯವನ್ನು ಮಂಡನೆ ಮಾಡಿದ್ದೀರಿ,ಆ ಮಂಡನೆಗೆ ನಾನು ಬೆಂಬಲವನ್ನು ಕೋರುತ್ತಾ, ಈ ಪ್ರಮುಖ ವ್ಯಕ್ತಿಗಳ ಜೀವನ,ಮಾರ್ಗದರ್ಶನ ಮತ್ತು ಇನ್ನಿತರ ವಿಚಾರಗಳ ಬಗ್ಗೆ ನಾನು ಮಂಡನೆ ಮಾಡುತ್ತಿದ್ದೇನೆ.

ಶ್ರೀ ಗೋವಿಂದ ನಾರಾಯಣರವರು 1977 ರಿಂದ 1983ರವರೆಗೆ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದಂತವರು. ಅವರು ಹಳೆಯ

ICS, ಸೇವೆಗೆ ಸೇರಿದಂತಹ ವ್ಯಕ್ತಿಗಳಾಗಿದ್ದರು.ಅವರು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಹಲವಾರು ಪ್ರಮುಖವಾದಂತಹ ಹುದ್ದೆಗಳನ್ನು ಅಲಂಕರಿಸಿ, ಆ ಸೇವೆಗಳನ್ನು ನಿರ್ವಹಿಸುವಾಗ ಬಹಳ ದಕ್ಷತೆಯಿಂದ ಕೆಲಸ ನಿರ್ವಹಣೆ ಮಾಡಿದವರು.ಅವರು ರಾಜ್ಯಪಾಲರಾಗಿ ಕೆಲಸ ನಿರ್ವಹಣೆ ಮಾಡಿರುವುದು ನಮ್ಮೆಲ್ಲರಿಗೂ ನೆನಪಿದೆ.ಅವರು ಆ ಒಂದು ಹುದ್ದೆಗೆ ಘನತೆಯನ್ನು ತರುವಂತಹ ಮತ್ತು ಗೌರವವನ್ನು ಎತ್ತಿ ಹಿಡಿಯುವಂತಹ ರೀತಿಯಲ್ಲಿ, ಎಲ್ಲರ ಪ್ರೀತಿಗೆ ಪಾತ್ರರಾಗಿ ಬಹಳ ಅತ್ಯಂತ ದಕ್ಷತೆಯಿಂದ ನಿರ್ವಹಣೆ ಮಾಡಿದರು. ಅವರು ಆ ಒಂದು academic service ನಲ್ಲಿ ಮತ್ತು ಇನ್ನಿತರ ಸೇವೆ ಸಲ್ಲಿಸಿರುವುದನ್ನು ಮೆಚ್ಚಿಕೊಂಡು ಕೇಂದ್ರ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿರಿಯರ ಕಾಲದಿಂದ ಆದರ್ಶ ವ್ಯಕ್ತಿಗಳಲ್ಲಿ ಶ್ರೀ ಗೋವಿಂದ ನಾರಾಯಣ್‌ರವರು ಒಬ್ಬರು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಗೋವಿಂದ ರಾಜುಲುರವರು, ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿದ್ದರು.ಅವರು ಇತ್ತೀಚೆಗೆ ನಡೆದಂತಹ ಅಪಘಾತದಲ್ಲಿ ನಿಧನರಾದರು.

ಅಧ್ಯಕ್ಷರು: ಈ ಸಂತಾಪ ಸೂಚನೆಯಲ್ಲಿ ಅವರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅವರ ಬಗ್ಗೆ ಸಂತಾಪ ಸೂಚನೆಯಲ್ಲಿ ಸೇರಿಸಬೇಕು.ಏಕೆಂದರೆ ಅವರು ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿ ಕೆಲಸ ಮಡಿದ್ದರು.ಅವರ ಬಗ್ಗೆ ಕೂಡ ಈ ನಿರ್ಣಯದಲ್ಲಿ ಸೇರಿಸಿಬಿಡಿ.

ಅಧ್ಯಕ್ಷರು: ಆಯಿತು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೋವಿಂದರಾಜುಲುರವರು ಅಲ್ಪ ಸಮಯದಲ್ಲಿ ಉತ್ತಮ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದರು.ಅವರು ಹೆಸರನ್ನು ಈ ಸಂತಾಪ ಸೂಚನಾ ನಿರ್ಣಯದಲ್ಲಿ ಸೇರಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯರವರು ಸೋಷಿಯಲಿಸ್ಟಿಕ್ ಮತ್ತು ಎಡಪಂಥೀಯ ಧ್ಯೇಯ ಉದ್ದೇಶ ಎನಿದೆ,ಅದಕ್ಕೆ ಬದ್ಧರಾದಂತಹ ವ್ಯಕ್ತಿ. ಬಹುಶಃ ಕಮ್ಯುನಿಸ್ಟ್ ವಿಚಾರಗಳು ಎಂದರೆ ಕಕ್ಕಿಲಾಯ ಎನ್ನುವಂತಹ ರೀತಿಯಲ್ಲಿ ನಿರೂಪಣೆಯಾಗಿದ್ದನ್ನು ನಾವು ನೋಡಿದ್ದೇವೆ.ಅವರು ಸಮಾಜ ತತ್ವಗಳ ಸಲುವಾಗಿ ಹೋರಾಟ ಮಾಡಿದಂತಹವರು.

ಮಾನ್ಯ ಬಿ.ವಿ.ಕಿಕ್ಕಿಲ್ಲಾಯರವರು ಕಮ್ಯುನಿಸ್ಟ್ ಸಮಾನತೆ ಬಗ್ಗೆ ಹೋರಾಟ ಮಾಡಿದಂಥವರು. ನಾವು ಇತ್ತೀಚಿನ ದಿವಸಗಳಲ್ಲಿ ಕಾರ್ಮಿಕ ಹೋರಾಟಗಳು ಕಡಿಮೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಕಾರ್ಮಿಕರ ಬಗ್ಗೆ ಚಿಂತನೆ, ಹೋರಾಟ ಮತ್ತು ಇವರ ಸೌಲಭ್ಯಗಳ ಬಗ್ಗೆ ಹಿಂದೆ ಒಂದು ಕಾಲವಿತ್ತು. ಆಗ ಬಹಳಷ್ಟು ಜನ ಕಾರ್ಮಿಕ ನಾಯಕರು ಕಾರ್ಮಿಕರ ವಿಷಯಗಳನ್ನು ತೆಗೆದುಕೊಂಡು ಹೋರಾಟ ಮಾಡಿದಂಥವರು, ಅದು ವಿಧಾನ ಸಭೆಯಲ್ಲಿರಬಹುದು, ವಿಧಾನ ಪರಿಷತ್ತಿನಲ್ಲಿ ಇರಬಹುದು. ಇಲ್ಲಿ ಕಾರ್ಮಿಕರ ವಿಷಯ ಬಂದಾಗ ಮಾತನಾಡುವಂಥ ವ್ಯಕ್ತಿಗಳು ಸಾಕಷ್ಟು ಜನರಿದ್ದರು, ಅಂಥವರಲ್ಲಿ ಮಾನ್ಯ ಕಕ್ಕಿಲ್ಲಾಯರವರು ಒಬ್ಬರಾಗಿದ್ದರು. ಇವರು ಸಹ ನಮ್ಮ ಜೊತೆಯಲ್ಲಿ ಇಂದು ಇಲ್ಲ. ಕರಾವಳಿ ಪ್ರದೇಶದಲ್ಲಿ ಭೂ ಸುಧಾರಣೆಯ ಕಾನೂನು ಜಾರಿಗೆ ಬರುವುದಕ್ಕೆ ವಿಶೇಷ ಶ್ರಮ ಪಟ್ಟಿದ್ದರು ಮತ್ತು ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿ ಮತ್ತು ರಾಜ್ಯ ಸಭೆಯ ಸದಸ್ಯರಾಗಿ ಮತ್ತು ಎರಡು ಬಾರಿ ಶಾಸಕರಾಗಿ ಕೆಲಸ ಮಾಡಿದರು ಮತ್ತು ಉತ್ತಮವಾದ ಲೇಖಕರಾಗಿಯೂ ಸಹ ಸಮಾಜಕ್ಕೆ ಮಾರ್ಗದರ್ಶನವಾಗುವಂಥ ಬಹಳ ಉತ್ತಮವಾದ ಲೇಖನಗಳನ್ನು ಬರೆದಂಥವರು ಮತ್ತು ಜನ ಜಾಗೃತಿ ಮಾಡುವಂಥ ಕೆಲಸವನ್ನು ಮಾಡಿದರು. ಇವತ್ತು ಇಂಥವರು ನಮ್ಮ ಮಧ್ಯೆ ಇಲ್ಲವೆಂಬ ಕೊರಗು ಇದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತಿದ್ದೇನೆ.

ಅದೇ ರೀತಿಯಲ್ಲಿ ಮಾನ್ಯ ಕೆ.ಜಿ.ಶಿವಪ್ಪನವರು ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಇವರಿಗೆ ಕೃಷಿ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಇತ್ತು. ಇವರಿಗೆ ಈ ಕ್ಷೇತ್ರದಲ್ಲಿ ವಿಶೇಷವಾದಂಥ ಒಲವು ಇತ್ತು ಮತ್ತು ಶಿಕ್ಷಣ ಕ್ಷೇತ್ರದಲ್ಲೂ ಸಹ ಸಾಕಷ್ಟು ಅನುಭವವನ್ನು ಹೊಂದಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸಿದಂಥ ಕೀರ್ತಿ ಮಾನ್ಯ ಶಿವಪ್ಪನವರಿಗೆ ಸಲ್ಲಬೇಕಾಗುತ್ತದೆ. ಇದರ ಜೊತೆಗೆ ಹಿಂದುಳಿದ ವರ್ಗಗಳ ಬಗ್ಗೆ ಹೆಚ್ಚು ಕಾಳಜಿ ಇದ್ದಂತ ವ್ಯಕ್ತಿಯಾಗಿದ್ದರು.

ಇನ್ನು ಮಾನ್ಯ ಕೆ.ಎಂ.ಕೃಷ್ಣಾರೆಡ್ಡಿಯವರು ಜನತಾ ಪರಿವಾರದ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದರು. ಇವರು 8 ಮತ್ತು 10ನೇ ವಿಧಾನಸಭೆಯ ಸದಸ್ಯರಾಗಿ ಹಲವಾರು ಪ್ರಮುಖವಾದ ಇಲಾಖೆಗಳಲ್ಲಿ ಸಚಿವರಾಗಿ ಕೆಲಸ ಮಾಡಿದಂಥವರು. ಅದು ರೇಷ್ಮೆ ಇರಬಹುದು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇರಬಹುದು, ಸಮಾಜ ಕಲ್ಯಾಣ ಮತ್ತು ಗೃಹ ಸಚಿವರಾಗಿ ಕೆಲಸ ಮಾಡಿದರು. ಇವರು ಯಾವ್ಯಾವ ಇಲಾಖೆಗಳಲ್ಲಿ ಕೆಲಸವನ್ನು ಮಾಡಿದ್ದಾರೆ,

ಅದರಲ್ಲಿ ಬಹಳ ದಕ್ಷತೆಯಿಂದ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಿದಂಥವರು. ಅದರಲ್ಲೂ ಹಿಂದುಳಿದ ವರ್ಗಗಳು ಮತ್ತು ಶೋಷಿತ ಜನಾಂಗದವರ ಬಗ್ಗೆ ಹೆಚ್ಚು ಕಾಳಜಿಯಿಂದ ಕೆಲಸ ಮಾಡಿದಂಥವರು. ಇವರು ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯ ಜೀವನದಲ್ಲಿ ಬಂದು ಉತ್ತಮ ಸಂಘಟಕರು ಮತ್ತು ಒಳ್ಳೆಯ ಚತುರ ಮಾತುಗಾರರು ಆಗಿದ್ದರು. ಇವರು by profession Advocate ಆಗಿದ್ದರು. ಇವರು ಈ profession ಮಾಡುವ ಸಂದರ್ಭದಲ್ಲೂ ಸಹಿತ ಉತ್ತಮ ವಕೀಲರಾಗಿ ಕೆಲಸವನ್ನು ಮಾಡಿ, ಇದರ ಜೊತೆಗೆ ಸಮಾಜದಲ್ಲಿರುವಂಥ ಹಲವಾರು ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿದಂಥವರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಕೆ.ಶ್ರೀರಾಮುಲುರವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ರಾಷ್ಟ್ರೀಯತೆಯನ್ನು ಮತ್ತು ದೇಶಪ್ರೇಮವನ್ನು ತೋರಿಸಿದಂಥವರು. ಇವರು ಕಾರ್ಮಿಕ ಕಲ್ಯಾಣದ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಿದಂಥವರು. ಇವರು ಗಾಂಧೀನಗರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು ಮತ್ತು ಮಾನ್ಯ ದೇವರಾಜ್ ಅರಸುರವರ ಮಂತ್ರಿಮಂಡಲದಲ್ಲಿ ಕಾರ್ಮಿಕ, ಅಬಕಾರಿ, ರೇಷ್ಮೆ ಮುಂತಾದ ಇಲಾಖೆಗಳ ಸಚಿವರಾಗಿ ಉತ್ತಮವಾದಂಥ ಕೆಲಸವನ್ನು ಮಾಡಿದಂಥವರು.

ಅದೇ ರೀತಿ ಮಾನ್ಯ ಸುಭಾಷ್ ಅಷ್ಟೂರೆಯವರು ಭಾಲ್ಕಿ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಕೆಲಸ ಮಾಡಿದಂಥವರು. ಮಾನ್ಯ ದೇವರಾಜ್ ಅರಸ್‌ರವರ ಮಂತ್ರಿ ಮಂಡಲದಲ್ಲಿ ನೀರಾವರಿ ಸಚಿವರಾಗಿ ಉತ್ತಮವಾಗಿ ಕೆಲಸ ಮಾಡಿದಂಥವರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಕೆ.ಜಿ.ಮಹೇಶ್ವರಪ್ಪನವರು ಒಬ್ಬ ಸಮಾಜವಾದಿ ಚಿಂತಕರಾಗಿದ್ದರು. ಇವರು ಸಮಾಜವಾದಿ ವಿಚಾರಗಳನ್ನು ಜನರಿಗೆ ಮತ್ತು ಸಮಾಜಕ್ಕೆ ತಲುಪಿಸುವಂಥದ್ದು ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಸಮಾಜವಾದಿ ಚಿಂತನೆಗೆ ಹೆಚ್ಚು ಒತ್ತನ್ನು ಕೊಟ್ಟಂಥ ವ್ಯಕ್ತಿಯಾಗಿದ್ದರೆಂಬ ಮಾತನ್ನು ಹೇಳಬೇಕಾಗುತ್ತದೆ. ಇವರು ಮಾಯಗೊಂಡ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಮತ್ತು ರಾಜ್ಯ ಸಭಾ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇವರು ಹಿರಿಯ ಚಿಂತಕರಾಗಿದ್ದರು ಮತ್ತು ಸಮಾಜದಲ್ಲಿರುವಂಥ ಅಂಕು-ಡೊಂಕುಗಳನ್ನು ತಿದ್ದುವಂತ ಕೆಲಸ ಮಾಡುವುದರಲ್ಲಿ ಇವರು ಒಬ್ಬ ಆದರ್ಶ ವ್ಯಕ್ತಿಯಾಗಿ ಮೆರೆದವರು. ಇವರು ನಿಧನರಾದಂಥ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೆ, ಆ ಸಂದರ್ಭದಲ್ಲಿ ಇವರ

ಅಂತಿಮ ದರ್ಶನವನ್ನು ಪಡೆಯುವಂಥ ಭಾಗ್ಯವೂ ಸಹಿತ ನನಗೆ ಬಂತೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಶ್ರೀಮತಿ ಜಿ.ಸಿ.ಭಾಗೀರಥಮ್ಮನವರು ಸಹ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಇವರು ತುಮಕೂರು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದಂಥವರು. ಇವರು ಸಮಾಜ ಸೇವೆ ಬಗ್ಗೆ ಮಹಿಳಾ ಸಾಕ್ಷರತೆಯ ಬಗ್ಗೆ ವಿಶೇಷವಾದಂಥ ಕಾಳಜಿಯನ್ನು ಹೊಂದಿದ್ದರು.

ಅದೇ ರೀತಿಯಲ್ಲಿ ಕುಷ್ಟಗಿ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿದ್ದ ಶ್ರೀ ಎಂ.ಗಂಗಣ್ಣ ಭೀಮಪ್ಪನವರು ಮತ್ತು ಪಾವಗಡ ಕ್ಷೇತ್ರದ ಶಾಸಕರಾಗಿದ್ದ ಮಾನ್ಯ ಎಂ.ನಾಗಪ್ಪನವರು ಮತ್ತು ಶಿಡ್ಲಘಟ್ಟದ ಶಾಸಕರಾಗಿದ್ದ ಶ್ರೀ ಎಸ್.ಮುನಿಶ್ಯಾಮಪ್ಪನವರು ಮತ್ತು ಸಿಂಧಗಿ ಕ್ಷೇತ್ರದ ಶಾಸಕರಾಗಿದ್ದಂಥ ಮಾನ್ಯ ಎಂ.ಹೆಚ್.ಬೆಕಿನಾಳಕರರವರು ಮತ್ತು ಶಿಗ್ಗಾವಿ ಕ್ಷೇತ್ರದ ಶಾಸಕರಾಗಿದ್ದಂಥ ಮಾನ್ಯ ನೀಲಕಂಠನಗೌಡ ವೀರನಗೌಡ ಪಾಟೀಲ್‌ರವರು ಹಾವೇರಿ ಜಿಲ್ಲೆಯ ಶಿಗ್ಗಾವಿ ಕ್ಷೇತ್ರದ ಪಕ್ಷೇತರರಾಗಿ ಆಯ್ಕೆಯಾಗಿದ್ದರು. ಇವರು ರೈತರ ಪರವಾಗಿ ಹೋರಾಟ ಮಾಡಿದ್ದು ಮತ್ತು ಸಮಾಜದ ಬಗ್ಗೆ ಕಳಕಳಿ ಇದ್ದಂಥ ವ್ಯಕ್ತಿಯಾಗಿದ್ದರು. ಇವರಿಗೆ ಜನರ ಪ್ರೀತಿ ಎಷ್ಟು ಇತ್ತೆಂದರೆ ಶಿಗ್ಗಾವಿ ಕ್ಷೇತ್ರದಲ್ಲಿ ಪಕ್ಷೇತರರಾಗಿ ಆಯ್ಕೆಯಾಗಿದ್ದಂಥವರು. ಇವರು ಇತ್ತೀಚಿನ ದಿವಸಗಳವರೆಗೂ ನಾನು ಸ್ವತಃ ನೋಡಿರುವಂಥದ್ದು. ಇವರಿಗೆ ರೈತರ ಬಗ್ಗೆ ಇರುವಂಥ ಕಾಳಜಿಯನ್ನು ಎಲ್ಲಾ ಹಂತಗಳಲ್ಲೂ ವ್ಯಕ್ತ ಪಡಿಸಿದ್ದರು. ಹಲವಾರು ಬಾರಿ ನಮ್ಮ ಜೊತೆಗೆ ಬಂದು ರೈತರ ಪರವಾದಂಥ ನಿಲುವು ಮತ್ತು ಇದರ ಬಗ್ಗೆ ಚಿಂತನೆ ಮಾಡುವ ಬಗ್ಗೆ ಸಾಕಷ್ಟು ಒತ್ತಡವನ್ನು ನಮ್ಮ ಮೇಲೆ ತರುವಂಥ ಕೆಲಸವನ್ನು ಮಾಡಿದರು. ಈ ರೀತಿ ಇವತ್ತು ಹಲವಾರು ಮಾಜಿ ಶಾಸಕರುಗಳು ಮತ್ತು ರಾಜ್ಯ ಸಭಾ ಸದಸ್ಯರುಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರು ನಮ್ಮ ಮಧ್ಯೆ ಇಲ್ಲ. ಇವರ ಅಗಲಿಕೆಯಿಂದ ಸಮಾಜಕ್ಕೆ ಹೆಚ್ಚಿನ ರೀತಿಯ ನಷ್ಟವಾಗಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇ ರೀತಿಯಲ್ಲಿ ರಾಜಕೀಯ ರಂಗಕ್ಕೂ ಹೆಚ್ಚಿನ ರೀತಿಯಲ್ಲಿ ನಷ್ಟವಾಗಿದೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದರ ಜೊತೆಗೆ ಇನ್ನೊಬ್ಬ ವ್ಯಕ್ತಿಯನ್ನು ಸೇರಿಸಬಹುದು. ಅವರು ಮಾನ್ಯ ರಾಜೇಶ್ ಖನ್ನಾರವರು ಚಲನಚಿತ್ರ ರಂಗದ ಹಿರಿಯ ನಟರಾಗಿ ಕೆಲಸ ಮಾಡಿದಂಥವರು, ಇವರು ನಿನ್ನೆ ದಿವಸ ನಿಧನರಾಗಿದ್ದಾರೆ. ಇವರು ಉತ್ತಮ ನಟರಾಗಿ ಚಲನಚಿತ್ರ ರಂಗದಲ್ಲಿ ಬಹಳಷ್ಟು

ಕೆಲಸವನ್ನು ಮಾಡಿದರು. ಇವರ ಸೇವೆಯನ್ನು ಸಹ ನಾವು ಮರೆಯಬಾರದೆಂಬ ಮಾತನ್ನು ಹೇಳುತ್ತೇನೆ. ಇವತ್ತು ಈ ಎಲ್ಲಾ ಹಿರಿಯರು ನಮ್ಮನ್ನು ಅಗಲಿದ್ದು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಇವರ ಕುಟುಂಬ ವರ್ಗದವರಿಗೆ ಅಗಲಿಕೆಯಿಂದ ಮಾನಸಿಕ ತೊಂದರೆಯಾಗಿದೆ, ಇದನ್ನು ನಿವಾರಣೆ ಮಾಡುವಂಥ ಮತ್ತು ಧೈರ್ಯ ತುಂಬುವಂಥ ಕೆಲಸ ಆಗಬೇಕು. ಈ ಧೈರ್ಯ ತುಂಬುವಂಥ ಕೆಲಸವಾಗಲಿ ಎಂದು ಆ ದೇವರಲ್ಲಿ ಪ್ರಾರ್ಥನೆ ಮಾಡುತ್ತಾ, ತಾವು ತಂದಿರುವ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ವಿರೋಧಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿರುವಂಥ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತೇನೆ. ಕಳೆದ ವಿಧಾನ ಸಭಾ ಅಧಿವೇಶನವಾದ ಮೇಲೆ ಬಹಳ ಜನ ಮಾನ್ಯ ಸದಸ್ಯರುಗಳು ಈ ಮನೆಯ ಸದಸ್ಯರಾಗಿದ್ದವರು ನಮ್ಮನ್ನು ಅಗಲಿದ್ದಾರೆ. ಮಾನ್ಯ ಗೋವಿಂದ ನಾರಾಯಣರವರು ಈ ರಾಜ್ಯದ ರಾಜ್ಯಪಾಲರಾಗಿದ್ದಂಥವರು. ಇವರು 1977 ರಿಂದ 1983ರವರೆಗೆ ಈ ರಾಜ್ಯದ ರಾಜ್ಯಪಾಲರಾಗಿದ್ದರು. ಆಗ ನಾನು ಇನ್ನು ಈ ಮನೆಯ ಸದಸ್ಯನಾಗಿರಲಿಲ್ಲ. ಇವರು ಬ್ರಿಟಿಷ್ ಕಾಲದ ಐ.ಸಿ.ಎಸ್. ಪಾಸ್ ಮಾಡಿದ್ದರು. ಇವರು ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿದಂಥವರು, ಇದರ ಜೊತೆಗೆ ಇವರು ಉತ್ತರ ಪ್ರದೇಶದವರಾಗಿದ್ದರಿಂದ, ಉತ್ತರ ಪ್ರದೇಶದ ಸರ್ಕಾರದಲ್ಲಿ ಸಿವಿಲ್ ಸರ್ವಿಸ್‌ನಲ್ಲಿದ್ದರು. ಅಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿ ಉತ್ತರ ಪ್ರದೇಶದ ಸರ್ಕಾರದಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದಂಥವರು. ಇದರ ಜೊತೆಗೆ ನೇಪಾಳದ ರಾಜರಿಗೆ ಸಲಹೆಗಾರರಾಗಿ ಕೆಲಸ ಮಾಡಿದರು. ಇವರಿಗೆ ಆಡಳಿತದಲ್ಲಿ ಒಳ್ಳೆಯ ಅನುಭವ, ನೈಪುಣ್ಯತೆ ಇತ್ತೆಂದು ಇವರನ್ನು ನೇಪಾಳದ ರಾಜರು ಸಲಹೆಗಾರರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕೆಂದರೆ ಇವರು ಆಡಳಿತದಲ್ಲಿ ಚೆನ್ನಾಗಿ ಪಳಗಿದ್ದರು, ನೈಪುಣ್ಯತೆ ಇತ್ತು, ಒಳ್ಳೆಯ ಆಡಳಿತಗಾರರಾಗಿದ್ದರೆನ್ನುವ ಕಾರಣಕ್ಕೋಸ್ಕರ ನೇಪಾಳರಾಜರು ಇವರನ್ನು ನೇಮಕ ಮಾಡಿಕೊಂಡಿದ್ದರು. ಜೊತೆಗೆ, ಅವರು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದ್ದಾರೆ. 1977ರಲ್ಲಿ ಅವರು ಕರ್ನಾಟಕಕ್ಕೆ ರಾಜ್ಯಪಾಲರಾಗಿ ಬಂದಿದ್ದರು. ಕರ್ನಾಟಕದ ರಾಜ್ಯಪಾಲರಾಗಿ ಅಂದಿನ ಚುನಾಯಿತ ಸರ್ಕಾರಕ್ಕೆ ಅನೇಕ ಸಲಹೆ ಸೂಚನೆಗಳನ್ನು ಕೊಟ್ಟು, ಉತ್ತಮ ರಾಜ್ಯಪಾಲರು ಎನ್ನುವ ಹೆಸರನ್ನು ಕೂಡ ಅವರು ಗಳಿಸಿಕೊಂಡಿದ್ದರು. ಕೇಂದ್ರ ಸರ್ಕಾರದವರು ಅವರ ಸೇವೆಯನ್ನು

ಗುರುತಿಸಿ ನಾಗರಿಕ ಪ್ರಶಸ್ತಿಯಾದ "ಪದ್ಮವಿಭೂಷಣ" ರಾಷ್ಟ್ರ ಪ್ರಶಸ್ತಿಯನ್ನು ಕೂಡ ಕೊಟ್ಟಿದ್ದರು. ಹಾಗಾಗಿ ಅವರು ಒಬ್ಬ ಗೌರವಸ್ಥ ವ್ಯಕ್ತಿ, ಒಬ್ಬ ಒಳ್ಳೆಯ ಆಡಳಿತಗಾರ, ದಕ್ಷತೆಯಿಂದ ಆಡಳಿತವನ್ನು ಮಾಡಿದಂಥವರು ಎಂದು ಸರ್ಕಾರ ಅವರನ್ನು ಗುರುತಿಸಿತ್ತು. ಇಂದು ಅವರು ನಮ್ಮನ್ನು ಅಗಲಿದ್ದಾರೆ. ಅವರಿಗೆ ನಾನು ಇಡೀ ಸದನದ ಪರವಾಗಿ ಗೌರವವನ್ನು ಈ ಸದನದಲ್ಲಿ ವ್ಯಕ್ತ ಮಾಡಲು ಬಯಸುತ್ತೇನೆ.

ಇನ್ನು ಕೆ. ಎಂ. ಕೃಷ್ಣಾರೆಡ್ಡಿಯವರು ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹುಟ್ಟಿದಂಥವರು. ಇವರು ಚಿಂತಾಮಣಿಯಿಂದ ಎರಡು ಬಾರಿ ಅಂದರೆ 1983ರಲ್ಲಿ ಮತ್ತು 2004ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರು ಎಡಪಂಥೀಯ ಚಿಂತನೆಗಳನ್ನು ಬೆಳೆಸಿಕೊಂಡಿದ್ದಂಥವರು. ಶಾಸಕರಾಗುವುದಕ್ಕೆ ಮುಂಚೆ ತಮ್ಮ ವಿದ್ಯಾರ್ಥಿ ದಿನಗಳಲ್ಲಿ ಅವರು ಕಮ್ಯುನಿಸ್ಟ್ ಪಾರ್ಟಿಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು ಮತ್ತು ಕಾಲೇಜಿನ ದಿನಗಳಲ್ಲಿ ವಿದ್ಯಾರ್ಥಿಗಳ ನಾಯಕರಾಗಿದ್ದಂಥವರು. ಅವರು ನಮ್ಮ ಜೊತೆಯಲ್ಲಿ ಅನೇಕ ಇಲಾಖೆಗಳಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದರು. ಪಶುಸಂಗೋಪನೆ, ರೇಷ್ಮೆ, ಸಮಾಜ ಕಲ್ಯಾಣ ಇಲಾಖೆಗಳ ಮಂತ್ರಿಯಾಗಿದ್ದರು. ಎಸ್,ಆರ್.–ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಅವರು ಗೃಹಮಂತ್ರಿಗಳಾಗಿ–ದ್ದರು. ಆ ಕಾಲದಲ್ಲಿಯೇ ಬೊಮ್ಮಾಯಿಯವರ ಸರ್ಕಾರವನ್ನು ಕಿತ್ತು ಹಾಕಿದ್ದು. Illegal ಆಗಿ ಅವರ ಸರ್ಕಾರವನ್ನು ಕಿತ್ತು ಹಾಕಿದರು ಎಂದು ಹೇಳಿ ಸುಪ್ರೀಂ ಕೋರ್ಟ್‌ನಲ್ಲಿ ಅದು ಒಂದು ಅಥಾರಿಟಿಯಾಗಿಬಿಟ್ಟಿದೆ. ಆ ಕಾಲದಲ್ಲಿ ಇವರು ಗೃಹಸಚಿವರಾಗಿದ್ದರು. ಇವರು ಬಹಳ ಸಜ್ಜನ ವ್ಯಕ್ತಿ, ಪ್ರಾಮಾಣಿಕವಾದಂಥ ವ್ಯಕ್ತಿ. ಹೋರಾಟದಿಂದ ಮುಂದೆ ಬಂದಂಥವರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ.

ಇನ್ನು. ಕೆ. ಶ್ರೀರಾಮುಲುರವರು ದೊಡ್ಡ ಸ್ವಾತಂತ್ರ್ಯ ಹೋರಾಟಗಾರರು. ಇವರು ಬಹಳ ದೀರ್ಘಕಾಲ ಬದುಕಿದ್ದರು. ನಾವು ಕಳೆದ ವರ್ಷ ಪಾದಯಾತ್ರೆಯನ್ನು ಪ್ರಾರಂಭ ಮಾಡಿದಾಗ ಇವರು ನಮ್ಮ ಪಾದಯಾತ್ರೆಯನ್ನು ಉದ್ಘಾಟನೆ ಮಾಡಲು ಬಂದಿದ್ದರು. ಕಾರ್ಮಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಹಳ ದೀರ್ಘಕಾಲ ಕಾರ್ಮಿಕರಿಗಾಗಿ ಹೋರಾಟ ಮಾಡಿ ಶ್ರಮಿಸಿದ್ದರು. ಜೊತೆಗೆ, ಇವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೂಡ ತಮ್ಮನ್ನು ತೊಡಗಿಸಿಕೊಂಡಿದ್ದರು. ಅದಕ್ಕಾಗಿ ಜೈಲುವಾಸ ಅನುಭವಿಸಿದ್ದರು. ಮೈಸೂರು ಚಲೋ ಚಳುವಳಿಯಲ್ಲಿ ಕೂಡ ಭಾಗವಹಿಸಿದ್ದರು. ಇವರೆಲ್ಲರೂ

ಕೂಡ ಈಗಿನ ಯುವಕರಿಗೆ ಆದರ್ಶವ್ಯಕ್ತಿಗಳು. ಇವರು ಸ್ವಾತಂತ್ರ್ಯಕ್ಕೋಸ್ಕರ ತಮ್ಮ ಇಡೀ ಜೀವನವನ್ನು ತ್ಯಾಗ ಮಾಡಿದ್ದಂಥ ಒಬ್ಬ ವ್ಯಕ್ತಿ. 1972ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿ, ದೇವರಾಜಅರಸುರವರ ಮಂತ್ರಿಮಂಡಲದಲ್ಲಿ ರೇಷ್ಮೆ ಮತ್ತು ಮೀನುಗಾರಿಕೆ ಸಚಿವರಾಗಿ ಕೂಡ ಕೆಲಸ ಮಾಡಿದ್ದರು. 1919ರಲ್ಲಿ ಜನಿಸಿದ ಇಂಥ ಒಬ್ಬ ದೊಡ್ಡ ಸ್ವಾತಂತ್ರ್ಯ ಹೋರಾಟಗಾರರಾದ ಇವರು ಸುಮಾರು 92–93 ವರ್ಷಗಳ ಕಾಲ ಬದುಕಿದ್ದರು. ಬಹಳ ದೀರ್ಘವಾಗಿ ಬದುಕಿದ್ದಂಥ ಆ ತಲೆಮಾರಿನ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದಂಥವರು ಇಂದು ನಮ್ಮನ್ನು ಅಗಲಿದ್ದಾರೆ. ಇವರ ನಿಧನದಿಂದ ನಮ್ಮ ರಾಜ್ಯಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಅವರು ಆದರ್ಶ ವ್ಯಕ್ತಿಯಾಗಿದ್ದಂಥವರು. ಅವರ ನಿಧನದಿಂದ ಈ ರಾಜ್ಯಕ್ಕೆ ಬಹಳಷ್ಟು ನಷ್ಟವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತೇನೆ.

ಇನ್ನು, ಎಂ. ನಾಗಪ್ಪನವರು ಪಾವಗಡ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ನಮ್ಮ ಜಯಚಂದ್ರರವರು ಮೊದಲನೇ ಬಾರಿ ಎಂ.ಎಲ್.ಎ.ಯಾಗಿದ್ದಾಗ ಅವರು ಎಂ.ಎಲ್.ಎ.ಯಾಗಿ ಆಯ್ಕೆಯಾಗಿ ಬಂದಿದ್ದಂಥವರು. ಆ ಸಮಯದಲ್ಲಿ ನಾವು ಇನ್ನೂ ಎಂ.ಎಲ್.ಎ.ಆಗಿರಲಿಲ್ಲ. ಅವರೂ ಕೂಡ ಶಾಸಕರಾಗಿ ಈ ರಾಜ್ಯದಲ್ಲಿ ಕೆಲಸ ಮಾಡಿದ್ದಾರೆ. ಅವರು ಮೂಲತಃ ಕೃಷಿಕರು. ಅವರು ತಾಂತ್ರಿಕ ಶಿಕ್ಷಣವನ್ನು ಕೂಡ ಪಡೆದುಕೊಂಡಿದ್ದರು. ಹಾಗಾಗಿ, ಅವರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರ ಆತ್ಮಕ್ಕೂ ಕೂಡ ನಾನು ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಲು ಬಯಸುತ್ತಿದ್ದೇನೆ.

ಇನ್ನು ಶ್ರೀಮತಿ ಜಿ. ಸಿ. ಭಾಗೀರಥಮ್ಮನವರು ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದಂಥವರು, ಪ್ರವೃತ್ತಿಯಲ್ಲಿ ಸಮಾಜ ಸೇವಕಿಯಾಗಿ ಕೆಲಸ ಮಾಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಇವರು ಒಬ್ಬ ಹೆಣ್ಣುಮಗಳಾದರೂ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಅಂದರೆ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿಯಾಗಿ, ಸೆರೆಮನೆವಾಸವನ್ನು ಅನುಭವಿಸಿದ್ದಂಥವರು. 1967ನೇ ಇಸವಿಯಲ್ಲಿ ಅವರು ಶಾಸಕರಾಗಿ, ಈ ಮನೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಸಮಾಜ ಸೇವಕಿಯಾಗಿದ್ದ ಇವರು ಬಹಳ ದೀರ್ಘಕಾಲ Social Welfare Boardನ ಸದಸ್ಯರಾಗಿ ಕೆಲಸ ಮಾಡಿದ್ದರು. ಇವತ್ತು ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ನಾನು ಚಿರಶಾಂತಿಯನ್ನು ಕೋರುತ್ತಿದ್ದೇನೆ.

ಇನ್ನು, ಎಸ್.ಮುನಿಶ್ಯಾಮಪ್ಪನವರು ಶಿಡ್ಲಘಟ್ಟದಿಂದ ಮೂರು ಬಾರಿ ಎಂ.ಎಲ್.ಎ.ಯಾಗಿ ಆಯ್ಕೆಯಾಗಿದ್ದರು. ಅವರು ನಮಗಿಂತ ಮುಂಚೆ ಒಂದು ಬಾರಿ ಆಯ್ಕೆಯಾಗಿದ್ದರು, ಎರಡು ಬಾರಿ ನಮ್ಮ ಜೊತೆಯಲ್ಲಿ ಶಾಸಕರಾಗಿ

ಆಯ್ಕೆಯಾಗಿ ಈ ಸದನದಲ್ಲಿದ್ದರು. ಅವರು ಸಮಾಜದ ಬಗ್ಗೆ ಅಪಾರ ಕಳಕಳಿಯನ್ನಿಟ್ಟುಕೊಂಡಿದ್ದರು. ಅವರು ಸಾಮಾನ್ಯ ರೈತ ಕುಟುಂಬದಿಂದ ಬಂದಂಥವರು. ತಾಲ್ಲೂಕು ಬೋರ್ಡ್ ಸದಸ್ಯರಾಗಿ, ಪಂಚಾಯಿತಿ ಚೇರ್‌ಮನ್‌ಆಗಿ, ಹಂತಹಂತವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಮೇಲಕ್ಕೆ ಬಂದಿದ್ದರು. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು, ಎಂ.ಹೆಚ್.ಬೆಕಿನಾಳಕರ ಇವರು 1978ರಲ್ಲಿ ಈ ಮನೆಯ ಸದಸ್ಯರಾಗಿ ಆಯ್ಕೆಯಾಗಿ ಬಂದಿದ್ದರು. ಅವರು ನ್ಯಾಯವಾದಿಯಾಗಿದ್ದರು. ಹಿಂದೆ ಜಿಲ್ಲಾ ಅಭಿವೃದ್ಧಿ ಮಂಡಳಿ ಎಂದು ಇತ್ತು. ತಾಲ್ಲೂಕು ಬೋರ್ಡ್ ಮೆಂಬರ್ ಆದವರಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿಗೆ ಆಯ್ಕೆ ಮಾಡುತ್ತಿದ್ದರು. ಹೀಗೆ, ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಅಪಾರವಾದ ಸೇವೆಯನ್ನು ಮಾಡಿದ್ದರು. ಇವರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಕೋರುತ್ತೇನೆ.

ಇನ್ನು, ನೀಲಕಂಠನಗೌಡ ವೀರನಗೌಡ ಪಾಟೀಲ್‌ರವರು ಶಿಗ್ಗಾವಿ ತಾಲ್ಲೂಕಿನವರು. 1983ರಲ್ಲಿ ನಮ್ಮ ಜೊತೆಯಲ್ಲಿ ಎಂ.ಎಲ್.ಎ.ಯಾಗಿ ಆಯ್ಕೆಯಾಗಿ ಬಂದಿದ್ದರು. ಅವರು independent ಆಗಿ ಗೆದ್ದು ಬಂದಿದ್ದರು. ರೈತರ ಜೊತೆಯಲ್ಲಿದ್ದು ಕೊಂಡು, ರೈತರ ಪರವಾಗಿ ಹೋರಾಟ ಮಾಡಿದ್ದಂಥ ಒಬ್ಬ ವ್ಯಕ್ತಿ. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಜೊತೆಗೆ, ಅವರು ಗ್ರಾಮೀಣ ಶಿಕ್ಷಣ ಕ್ಷೇತ್ರದಲ್ಲಿ ಕೂಡ ಕೆಲಸ ಮಾಡಿದ್ದಾರೆ. ಇಂದು ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಶಾಂತಿಯನ್ನು ಕೋರುತ್ತೇನೆ.

ಇನ್ನು, ಕೆ.ಜಿ.ಮಹೇಶ್ವರಪ್ಪನವರು ದಾವಣಗೆರೆಯವರು. ಇವರು 1983ರಲ್ಲಿ ಒಂದು ಸಲ MLA ಆಗಿದ್ದರು. ಆಮೇಲೆ one term ರಾಜ್ಯಸಭೆ ಮೆಂಬರ್ ಆಗಿ ಕೂಡ ಕೆಲಸ ಮಾಡಿದ್ದರು. ನಮಗೆ ಇವರು ಅಧ್ಯಕ್ಷರಾಗಿದ್ದರು. ನಾನು ನನ್ನ ವಿದ್ಯಾರ್ಥಿದಿಸೆಯಲ್ಲಿ ಸಮಾಜವಾದಿ ಯುವಜನ ಸಭಾಗೆ ಸೇರಿದ್ದಾಗ ಇವರು ಕರ್ನಾಟಕದಲ್ಲಿ Socialist Party ಅಧ್ಯಕ್ಷರಾಗಿದ್ದರು. ಇವರು ವೃತ್ತಿಯಲ್ಲಿ ವಕೀಲರಾಗಿದ್ದರು. ಗಾಂಧಿನಗರದಲ್ಲಿ ನಮ್ಮ office ಇತ್ತು. ಅಲ್ಲಿ ಕೆ.ಜಿ.ಮಹೇಶ್ವರಪ್ಪನವರನ್ನು ಭೇಟಿ ಮಾಡುವುದಕ್ಕೆ ನಾವು ಬರುತ್ತಿದ್ದೆವು. ಇವರು ದೊಡ್ಡ ಹೋರಾಟಗಾರರಾಗಿದ್ದರು ಮತ್ತು ಗೋಪಾಲಗೌಡರ ಸಹವರ್ತಿಯಾಗಿದ್ದರು. ಹೇಳಬೇಕೆಂದರೆ ಇವರು ಗೋಪಾಲಗೌಡರ ಶಿಷ್ಯರಾಗಿದ್ದರು.

ಇವರು ಬಹಳ ಸಜ್ಜನ ವ್ಯಕ್ತಿ. ಇವರು Socialist Party ಅಧ್ಯಕ್ಷರಾಗಿ ಬಹಳ ವರ್ಷ ಕೆಲಸ ಮಾಡಿದ್ದರು. ಇವರು PSP ನಲ್ಲಿ ಅನೇಕ ಚುನಾವಣೆಗೆ ನಿಂತು ಸೋಲುತ್ತಿದ್ದರು. ಅವರು ಸೋಲುವುದೇ ಜಾಸ್ತಿಯಾಗಿತ್ತು. ಜನತಾಪಾರ್ಟಿ ಆದ ಮೇಲೆ 1983ರಲ್ಲಿ ಗೆದ್ದು ಬಂದಿದ್ದರು. ಆಮೇಲೆ ಒಂದು ಸಲ ರಾಜ್ಯಸಭಾ ಮೆಂಬರ್ ಆಗಿದ್ದರು. ನಮಗೆಲ್ಲ ರಾಜಕೀಯವಾಗಿ ಹೆಚ್ಚಾಗಿ ಬೆನ್ನು ತಟ್ಟುತ್ತಿದ್ದವರು. ನಾವೆಲ್ಲ ರಾಜಕೀಯವಾಗಿ ಮುಂದೆ ಬರಲಿಕ್ಕೆ ಬಹಳ ಸಹಾಯ ಮಾಡಿದಂಥವರು. ಇವರು ನಮ್ಮನ್ನು ಅಗಲಿದ್ದಾರೆ. ಇನ್ನು, ಬಿ.ವಿ.ಕಕ್ಕಿಲ್ಲಾಯರವರು ಕಾಸರಗೋಡು ತಾಲ್ಲೂಕಿನವರು, ಪದವೀಧರರಾಗಿದ್ದರು, ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಭಾಗವಹಿಸಿದ್ದರು. ಜೊತೆಗೆ, ಕಮ್ಯುನಿಸ್ಟ್ ಪಾರ್ಟಿಯಲ್ಲಿ ಇದ್ದವರು, communism ನಲ್ಲಿ ನಂಬಿಕೆ ಇಟ್ಟುಕೊಂಡು ಕೊನೆಯವರೆಗೂ communist ರಾಗಿಯೇ ಬದುಕಿದ್ದವರು. ಅವರು ಇಲ್ಲಿ ನಮ್ಮ ಮನೆಯ ಸದಸ್ಯರಾಗಿರಲಿಲ್ಲ. 1952ರಲ್ಲಿ ಮದ್ರಾಸ್ ರಾಜ್ಯಕ್ಕೆ ಸೇರಿದ್ದ ಕಾಸರಗೋಡಿನಿಂದ ಶಾಸಕರಾಗಿದ್ದರು. ಅವರೂ ಕೂಡ ನಮ್ಮನ್ನಗಲಿದ್ದಾರೆ. ಬಹಳ ದೀರ್ಘ ಕಾಲ ಅವರೂ ಕೂಡ Communist Party ಯಲ್ಲಿ ಹೋರಾಟ ಮಾಡಿಕೊಂಡು ಕಾರ್ಮಿಕ ಕ್ಷೇತ್ರದಲ್ಲಿ ಮತ್ತು ಸಮಾಜ ಬದಲಾವಣೆಗಾಗಿ ಪ್ರಯತ್ನ ಮಾಡಿದಂಥವರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದಂಥವರು. ಅವರೂ ಕೂಡ ನಮ್ಮನ್ನಗಲಿದ್ದಾರೆ. ಇನ್ನು, ಸುಭಾಷ್ ಅಷ್ಟೂರೆರವರು 1972ರಲ್ಲಿ ಸ್ವಲ್ಪ ದಿವಸ ಭಾಲ್ಕಿ ಕ್ಷೇತ್ರದಿಂದ ಶಾಸಕರಾಗಿದ್ದರು. ನಂತರ ಸ್ವಲ್ಪ ದಿವಸ ದೇವರಾಜ ಅರಸುರವರ ಮಂತ್ರಿಮಂಡಲದಲ್ಲಿ ಸಣ್ಣ ನೀರಾವರಿ ಮಂತ್ರಿಯಾಗಿ ಕೆಲಸ ಮಾಡಿದ್ದರು. ಬೀದರ್‌ನಲ್ಲಿ ಕೆಲವು ನೀರಾವರಿ ಯೋಜನೆಗಳು ಬರಬೇಕಾದರೆ ಇವರೇ ಕಾರಣಕರ್ತರಾಗಿದ್ದರು. ಅವರೂ ಕೂಡ ನಮ್ಮನ್ನಗಲಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ನಾನು ನೆನೆಸಿಕೊಳ್ಳಲು ಬಯಸುತ್ತಿದ್ದೇನೆ. ಇನ್ನು, ಎಂ. ಗಂಗಣ್ಣ ಭೀಮಪ್ಪ ರವರು ಒಂದು ಸಲ 1978ರಿಂದ 1983 ರವರೆಗೆ ಜಯಚಂದ್ರರವರ ಜೊತೆಯಲ್ಲಿ ಶಾಸಕರಾಗಿದ್ದರು. ಅವರು ಬಹಳ ಒಳ್ಳೆಯ ಮನುಷ್ಯ. ಅವರು ಶಾಸಕರಾಗಿರುವಾಗಲೇ ಬಸ್ಸಿನಲ್ಲಿ ಬರುವಾಗ ಅವರಿಗೆ accident ಆಯಿತು. ಅದಾದಮೇಲೆ ಅವರು ದೈಹಿಕವಾಗಿ ಸ್ವಲ್ಪ ಕುಗ್ಗಿಹೋದರು. ಅವರು ಅಷ್ಟೊಂದು active ಆಗಿರಲಿಲ್ಲ. ಅವರಿಗೆ accident ಆದಾಗ ಅವರು ಬದುಕುವುದೇ ಇಲ್ಲ ಎನ್ನುವ ಮಾತು ಇತ್ತು. ಆದರೂ ಕೂಡ ಅವರು ಬದುಕಿ ಉಳಿದಿದ್ದರು. ನಾನು ಒಂದು ಸಾರಿ ಇಲ್ಲಿಯ Assembly proceedings ನೋಡಿದ್ದೆ. ಅವರು

ಯಾವಾಗಲೂ Assembly ಯಲ್ಲಿ ಬಹಳ active ಆಗಿ ಎಲ್ಲಾ ವಿಚಾರಗಳಲ್ಲಿ, ಎಲ್ಲಾ ವಿಷಯಗಳಲ್ಲಿ ರಾಜ್ಯದ ಸಮಸ್ಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದೇನಿದು?

ಅಧ್ಯಕ್ಷರು : ಏನಿದು? ಸಂತಾಪ ಸೂಚನೆ ನಿರ್ಣಯದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಎಲ್ಲರೂ ಅಲ್ಲಲ್ಲಿಯೇ ನಿಂತು ಮಾತನಾಡುತ್ತಿದ್ದೀರಲ್ಲಾ?

ಶ್ರೀ ಸಿದ್ದರಾಮಯ್ಯ : Dissident activities ಮಾಡುವುದಕ್ಕೆ ಇದೇನಾ ಸಮಯ ಇರುವುದು? ಬೇರೆ ಸಮಯದಲ್ಲಿ ಮಾಡಲಿ. ಈಶ್ವರಪ್ಪನವರೆ, ಅವರಿಎಲ್ಲ ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ಟಿ. ಬಿ. ಜಯಚಂದ್ರ : ಪಾಪ, ಅವರು ಕುಳಿತುಕೊಳ್ಳುವುದಕ್ಕೆ ತಮ್ಮ ಸೀಟುಗಳನ್ನು ತಡಕಾಡುತ್ತಿದ್ದಾರೆ. ಯಾರಿಗೆ ಯಾವ ಸೀಟೋ ಏನೋ ಗೊತ್ತಾಗುತ್ತಿಲ್ಲ. ಅವರಿಗೆ ಮೊದಲೇ ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಸಿದ್ದರಾಮಯ್ಯ ಅವರು ಮೊದಲಿನ ' ಸ್ಥಾನಗಳನ್ನೆಲ್ಲ ಬಿಟ್ಟುಬಿಟ್ಟಿದ್ದಾರೆ. ಈಗ ಬೇರೆ ಕಡೆ ಹುಡುಕುತ್ತಿದ್ದಾರೆ. ಶಂಕರಲಿಂಗೇಗೌಡರಿಗೂ ದೊಡ್ಡ ಅನ್ಯಾಯವಾಯಿತು. ಪಾಪ ಇದೆಲ್ಲ ಮಾಡಬಾರದಾಗಿತ್ತು. 4 ಸಾರಿ ಎಂಎಲ್‌ಎ ಆದವರಿಗೆ ಈ ತರಹ ಅನ್ಯಾಯ ಮಾಡಿದರೆ ಹೇಗೆ? ನಮ್ಮ ಜಿಲ್ಲೆಗೆ ಅನ್ಯಾಯವಾಯಿತಲ್ಲ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಏನು ಮಾಡುವುದಕ್ಕಾಗುತ್ತದೆ?

ಶ್ರೀ ಸಿದ್ದರಾಮಯ್ಯ : ಏನು ಮಾಡುವುದಕ್ಕಾಗುತ್ತದೆ ಎಂದರೆ, ಈ ರೀತಿ helpless ಆದರೆ ಹೇಗೆ? you are a fighter ಇನ್ನು, ಎಂ.ಗಂಗಣ್ಣ ಭೀಮಪ್ಪರವರು ವಿಧಾನಸಭೆ ಅಧಿವೇಶನ ನಡೆಯುವಾಗಲೆಲ್ಲ ಇಲ್ಲಿ ಬಂದು regular ಆಗಿ ಕುಳಿತುಕೊಂಡಿರುತ್ತಿದ್ದರು. ಅವರಿಗೆ ಅದರಲ್ಲಿ ಅಷ್ಟೊಂದು ಆಸಕ್ತಿ ಇತ್ತು. ಯಾವಾಗಲೂ ನಮಗೆ ಏನಾದರೂ ಒಂದಷ್ಟು information ತಂದುಕೊಡುತ್ತಿದ್ದರು. ಸಾರ್ವಜನಿಕ ವಿಚಾರಗಳ ಬಗ್ಗೆ ಆಸಕ್ತಿ ಇತ್ತು, ಸಮಸ್ಯೆಗಳ ಬಗ್ಗೆ ಅಧಿವೇಶನದಲ್ಲಿ ಪ್ರಸ್ತಾಪಿಸಿ ಎಂದು ಮಾಹಿತಿ ತಂದುಕೊಡುತ್ತಿದ್ದರು. ಅವರು ಇತ್ತೀಚೆಗೆ ನಿಧನರಾದರು. ಅವರು ಸತ್ತ ವಿಷಯ ಗೊತ್ತಾಗಲೇ ಇಲ್ಲವೆಂದು ಜಯಚಂದ್ರರವರು ಹೇಳುತ್ತಿದ್ದರು. ಎಂ.ಗಂಗಣ್ಣ ಭೀಮಪ್ಪರವರು ಸತ್ತು 15 ರಿಂದ 20 ದಿವಸ ಆಗಿರಬಹುದು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಇನ್ನು, ಕೆ.ಜಿ.ಶಿವಪ್ಪನವರು ಶಿವಮೊಗ್ಗದವರು.

ಇವರು 1991ರಿಂದ 1996ರವರೆಗೆ MP ಆಗಿದ್ದರು. ಇವರೂ ಕೂಡ ನಮ್ಮನ್ನಗಲಿದ್ದಾರೆ. ಇವರ ಆತ್ಮಕ್ಕೆ ಕೂಡ ನಾನು ಶಾಂತಿ ಕೋರುತ್ತೇನೆ. ಹಾಗೆಯೇ ಹಿಂದಿ ಚಲನಚಿತ್ರ ರಂಗದಲ್ಲಿ ಅಪಾರವಾದ ಹೆಸರು ಗಳಿಸಿದ್ದಂಥ ಚಿತ್ರನಟ ರಾಜೇಶ್ ಖನ್ನಾ ನಿಧನರಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ರಾಜೇಶ್ ಖನ್ನಾ ನಟಿಸಿರುವ ಸಿನಿಮಾಗಳನ್ನು ತಾವೂ ನೋಡಿರಬಹುದು. ನೋಡಿಲ್ಲವೇ?

ಅಧ್ಯಕ್ಷರು: ನನಗೆ ಸಿನಿಮಾ ನೋಡುವ ಅಭ್ಯಾಸವಿಲ್ಲ.

ಶ್ರೀ ಸಿದ್ದರಾಮಯ್ಯ: ಹೌದೇ? ಹಾಗಾದರೆ ಆನಂದ್ ಎನ್ನುವ ಹಿಂದಿ ಸಿನಿಮಾ ನೋಡಿಲ್ಲವೇ?

ಅಧ್ಯಕ್ಷರು: ಇಲ್ಲ.

ಶ್ರೀ ಸಿದ್ದರಾಮಯ್ಯ: ಈಶ್ವರಪ್ಪನವರೂ ಸಹ ಈ ಸಿನಿಮಾ ನೋಡಿದ ಹಾಗೆ ಕಾಣಿಸುವುದಿಲ್ಲ. ಅವರು ಭರತನಾಟ್ಯ ನೋಡುತ್ತಾರೆ, ಸಿನಿಮಾ ನೋಡುವುದಿಲ್ಲ. ರಾಜೇಶ್ ಖನ್ನಾರವರು ಬಹುಶಃ ಆ ಕಾಲದಲ್ಲಿ ಬಹಳ ಉತ್ತುಂಗಕ್ಕೇರಿದ ಒಬ್ಬ ಯಶಸ್ವಿ ನಟ. ಅಂದು ಆ ನಟ ಹರೆಯದ ಹೆಣ್ಣುಮಕ್ಕಳ ಹೃದಯಕ್ಕೆ ಬೆಂಕಿ ಹಚ್ಚಿದ್ದರು. ಸಾಮಾನ್ಯ ಜನರು ಈ ತರಹ ಮಾತನಾಡಿಕೊಳ್ಳುತ್ತಿದ್ದರು. ಅಷ್ಟರಮಟ್ಟಿಗೆ ಅವರು popular actor ಆಗಿದ್ದರು. ಅವರು ಬಹಳ romantic hero ಆಗಿದ್ದರು. ಅವರನ್ನು romantic hero ಎಂದು ಕರೆಯುತ್ತಿದ್ದರು. ಅವರು ಒಂದು ಸಲ ಕಾಂಗ್ರೆಸ್ ಪಕ್ಷದಿಂದ ಲೋಕಸಭೆಗೆ ಆಯ್ಕೆಯಾಗಿ ಕೆಲಸ ಮಾಡಿದ್ದರು. ಅವರು ನಮ್ಮನ್ನಗಲಿದ್ದಾರೆ. ಇದರಿಂದ ಚಲನಚಿತ್ರ ಕ್ಷೇತ್ರಕ್ಕೆ ಅಪಾರವಾದ ನಷ್ಟವಾಗಿದೆ. ಇವತ್ತು ಬಹಳ ಜನರಿಗೆ ಅವರ ಅಗಲಿಕೆಯಿಂದ ನೋವಾಗಿದೆ. ಕರ್ನಾಟಕ ಅಲ್ಲ, ಇಡೀ ದೇಶದಲ್ಲಿ ಹೆಸರು ಮಾಡಿದ್ದ ಒಬ್ಬ ಚಲನಚಿತ್ರ ನಟ. ಅವರ ಆತ್ಮಕ್ಕೂ ಕೂಡ ಶಾಂತಿ ಕೋರುತ್ತೇನೆ. ಹಾಗೆಯೇ ಗೋವಿಂದರಾಜುಲುರವರು ನ್ಯಾಯಾಧೀಶರಾಗಿದ್ದಂಥವರು. ಅವರೂ ಕೂಡ ಅಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಚಿರಶಾಂತಿಯನ್ನು ಕೋರಿ ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಸಿರಾ) ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತೇನೆ. ಈ ಮನೆಯ ಸದಸ್ಯರಾಗಿ–ದ್ದವರು ಮತ್ತು ಲೋಕಸಭಾ ಸದಸ್ಯರಾಗಿದ್ದಂಥವರು ಮತ್ತು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ಅವರದೇ ಆದ ಕ್ಷೇತ್ರದಲ್ಲಿ ಕೊಟ್ಟು ಜನರ ಮನ್ನಣೆಯನ್ನು ಗಳಿಸಿ ಜನರ ಪ್ರೀತಿ ವಿಶ್ವಾಸ ಗಳಿಸಿದವರನ್ನು ನೆನಸಿಕೊಳ್ಳುವ ಕೆಲಸವನ್ನು ಇವತ್ತು ನಾವು ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿ

ನನಗೆ ಒಂದು ವಿಷಯದಲ್ಲಿ ದುಃಖವಾಗುತ್ತದೆ. ನಾವು 13 ಜನರನ್ನು ಕಳೆದುಕೊಂಡಿದ್ದೇವೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ, ನಾನು 1978ರಲ್ಲಿ ಶಾಸಕನಾಗಿದ್ದ ಸಂದರ್ಭದಲ್ಲಿ ಬಹಳಷ್ಟು ಜನ ಶಾಸಕರಾಗಿದ್ದಂಥವರು ನಮ್ಮ ಜೊತೆಯಲ್ಲಿ ಒಡನಾಟವನ್ನು ಇಟ್ಟುಕೊಂಡಿದ್ದವರು, ಅವರ ನಡೆನುಡಿ, ಅವರ ಮಾತುಗಳನ್ನು, ಅವರು ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಉತ್ಸಾಹವನ್ನು ನೆನೆಸಿಕೊಂಡಾಗ ಬಹಳಷ್ಟು ದುಃಖವಾಗುತ್ತದೆ. ಆದರೂ ಕೂಡ ಅವರೆಲ್ಲರೂ ಕಾಲಗರ್ಭದಲ್ಲಿ ಸೇರಿದ್ದಾರೆ. ಎಲ್ಲರೂ ಕೂಡ ಒಂದು ದಿವಸ ಕಾಲಗರ್ಭದಲ್ಲಿ ಸೇರಬೇಕಾಗುತ್ತದೆ, ಪ್ರಕೃತಿಯಲ್ಲಿ ಸೇರಬೇಕಾಗುತ್ತದೆ. ಆದರೆ, ಅವರು ಕೊಟ್ಟಿರುವ ಕೊಡುಗೆಗಳು ಏನಿವೆ, ಅವರು ಈ ಸಭೆಯ ಕಲಾಪದಲ್ಲಿ ಭಾಗವಹಿಸಿ ಮಾಡಿರುವ ಕೆಲಸವೇನಿದೆ, ಸಮಾಜವನ್ನು, ಕ್ಷೇತ್ರವನ್ನು ಅಭಿವೃದ್ಧಿ ಮಾಡುವ ರೀತಿಯಲ್ಲಿ ಅವರು ಮಾಡಿದ ಚಿಂತನೆಗಳೇನಿವೆ, ಆ ಚಿಂತನೆಗಳಿಗೆ ಒತ್ತು ಕೊಡುವ ಕೆಲಸವನ್ನು ಮಾಡಿದರೆ ಮಾತ್ರ ಅವರ ಬಗ್ಗೆ ಮಾತನಾಡಿದ್ದು ಕೂಡ ಪ್ರಯೋಜನವಾಗುತ್ತದೆ. ಕೇವಲ ಸಾಂಕೇತಿಕವಾಗಿ ಏನೋ ಒಂದು ಸಂತಾಪ ಸೂಚನೆ ನಿರ್ಣಯ ತಂದಿದ್ದಾರೆಂದು ಮಾತನಾಡುವುದಕ್ಕಿಂತ ಹೆಚ್ಚಾಗಿ ಅವರ ಕೂಡುಗೆ, ಅವರ ಚಿಂತನೆಗಳನ್ನು ನಾವು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ, ಸಭೆಯ ಕಲಾಪಗಳನ್ನು ಉತ್ತಮಪಡಿಸುವ ರೀತಿಯಲ್ಲಿ ಅದರ ಪ್ರಯೋಜನ ಪಡೆದುಕೊಂಡರೆ ಒಳ್ಳೆಯದಾಗುತ್ತದೆಂಬುದು ನನ್ನ ಭಾವನೆ. ಬಹಳ ಮುಖ್ಯವಾಗಿ ಗೋವಿಂದ ನಾರಾಯಣರವರು ರಾಜ್ಯಪಾಲರಾಗಿದ್ದರು. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಅವರು ಇದ್ದಂಥವರು. ಅವರು ಮಿತಭಾಷಿಯಾಗಿದ್ದರು. ಅತ್ಯಂತ ವಿದ್ಯಾವಂತರಾಗಿದ್ದರು. ರಾಜ್ಯಪಾಲರಾಗಿರುವವರು ನಮ್ಮನ್ನು Republic Day or Independence Day ಸಂದರ್ಭಕ್ಕೆ ಕರೆದಾಗ ಒಬ್ಬೊಬ್ಬ ಶಾಸಕರ ಹತ್ತಿರವೂ ಕುಳಿತು ಗಂಟೆಗಟ್ಟಲೆ ಚರ್ಚೆ ಮಾಡಿ ಮಾತನಾಡುವಂಥ ರಾಜ್ಯಪಾಲರಾಗಿದ್ದರು. ಆ ಸಂದರ್ಭದಲ್ಲಿ ಬಹಳಷ್ಟು ಜನ ಯುವಕರು ಆಯ್ಕೆಯಾಗಿದ್ದರು. ಅವರಿಗೆ ಉತ್ಸಾಹ ತುಂಬಬೇಕೆಂಬುದೇ ಗುರಿಯಾಗಿತ್ತು. ಅಂಥ ರಾಜ್ಯಪಾಲರನ್ನು ನಾವು ಕಳೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿ ಕೆ.ಎಂ.ಕೃಷ್ಣಾರೆಡ್ಡಿಯವರ ಬಗ್ಗೆ ಅವರು ಮಾಡಿರುವ ಸೇವೆ ಬಗ್ಗೆ ಈಗಾಗಲೇ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಸಾಕಷ್ಟು ಮಾತನಾಡಿದ್ದಾರೆ. ಕೆ. ಶ್ರೀರಾಮುಲುರವರು ಕೂಡ ಕಾರ್ಮಿಕ ನಾಯಕರಾಗಿದ್ದರು, Labour Minister ಆಗಿದ್ದರು, ದೇವರಾಜ ಅರಸುರವರ ಸಂಪುಟದಲ್ಲಿ ಅವರು ಮಾಡಿದ ಪ್ರಯತ್ನವನ್ನು ಬಹುಶಃ ಅವರ

ನಂತರ ಯಾರೂ ಕೂಡ ಮಾಡುವುದಕ್ಕಾಗದಿರುವಂಥ ಪ್ರಯತ್ನ ಮಾಡಿದ್ದರು. ದುಬಾರಿ ಹೋಟೆಲ್ ತಿಂಡಿಗಳ ಬೆಲೆಗಳನ್ನು ನಿಯಂತ್ರಣ ಮಾಡುವ ರೀತಿಯಲ್ಲಿ ಅದಕ್ಕೆ ಕಟ್ಟಪ್ಪಣೆ ಮಾಡಿ ಅದನ್ನು ನಿಯಂತ್ರಣ ಮಾಡುವ ಕೆಲಸವನ್ನು ಮಾಡಿರುವವರೆಂದರೆ ಬಹುಶಃ ಕೆ.ಶ್ರೀರಾಮುಲುರವರೊಬ್ಬರೇ. ತದನಂತರ ಯಾರೂ ಕೂಡ ಆ ಪ್ರಯತ್ನವನ್ನು ಮಾಡಲಿಲ್ಲ. ಬಹುಶಃ ಅಂಥ ಕೆ. ಶ್ರೀರಾಮುಲುರವರು ಮತ್ತೊಮ್ಮೆ ಹುಟ್ಟಿ ಬಂದು ಹೋಟೆಲ್ ತಿಂಡಿಗಳ ಬೆಲೆಗಳನ್ನು ನಿಯಂತ್ರಣ ಮಾಡುವ ಅನಿವಾರ್ಯತೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು, ನಮ್ಮ ಜಿಲ್ಲೆಯವರೇ ಆದ ಎಂ. ನಾಗಪ್ಪನವರು ಮತ್ತು ಜಿ.ಸಿ. ಭಾಗೀರಥಮ್ಮನವರಿಬ್ಬರೂ ಕೂಡ ದೈವಾಧೀನರಾಗಿರುವುದು ಬಹಳ ದುಃಖ ತರುವ ಸಂಗತಿಯಾಗಿದೆ. ಎಂ.ನಾಗಪ್ಪನವರು ಪಾವಗಡ ಕ್ಷೇತ್ರದಿಂದ 1978ರಲ್ಲಿ ಆಯ್ಕೆಯಾಗಿ 5 ವರ್ಷಗಳ ಕಾಲ ಈ ಸಭೆಗೆ ತಮ್ಮದೇ ಆದ ಕೊಡುಗೆ ಕೊಟ್ಟಿದ್ದಂಥವರು. ಸುಶಿಕ್ಷಿತ ಸಮಾಜದಿಂದ ಬಂದವರು, ಸಂಸ್ಕೃತಿಯನ್ನು ಹೊಂದಿದ್ದವರನ್ನು ನಾವು ಕಳೆದುಕೊಂಡಿದ್ದೇವೆ. ಜಿ.ಸಿ. ಭಾಗೀರಥಮ್ಮರವರು ಸ್ವಾತಂತ್ರ್ಯ ಪೂರ್ವದಲ್ಲಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿದ್ದವರು. ಅವರು ಸುಮಾರು 90 ವರ್ಷಗಳ ಕಾಲ ಬದುಕಿದ್ದರು. ಅವರ ಜೀವನದ ಕೊನೆಯ ದಿನದವರೆಗೂ ಅವರು ಎಲ್ಲಾ ರೀತಿಯಲ್ಲೂ ಒಂದು programme ಕೂಡ ಬಿಡುತ್ತಿರಲಿಲ್ಲ. ಯಾವತ್ತೂ ಕೂಡ ದೇಶ, ರಾಜ್ಯದ ಬಗ್ಗೆ, ಜಿಲ್ಲೆ ಬಗ್ಗೆ ಒಳ್ಳೆಯ ಚಿಂತನೆ ಇಟ್ಟುಕೊಂಡಿದ್ದ ಜಿ.ಸಿ ಭಾಗೀರಥಮ್ಮನವರು ನಿಧನರಾಗಿದ್ದಾರೆ. ಅದೇ ರೀತಿ ಎಸ್. ಮುನಿಶ್ಯಾಮಪ್ಪ, ಎಂ.ಹೆಚ್. ಬೆಕಿನಾಳಕರ, ಕೆ.ಜಿ. ಮಹೇಶ್ವರಪ್ಪ, ಬಿ.ವಿ.ಕಕ್ಕಿಲ್ಲಾಯರವರು ನಿಧನ ಹೊಂದಿದ್ದಾರೆ. ಕೆಲವು ಜನರನ್ನು ನಾವು ನೆನಪಿಸಿಕೊಳ್ಳಲೇ ಬೇಕಾಗುತ್ತದೆ. ಎಂ.ಎಸ್. ಕೃಷ್ಣನ್ ಇರಬಹುದು, ಬಿ.ವಿ. ಕಕ್ಕಿಲ್ಲಾಯರವರು ಇರಬಹುದು, ಶ್ಯಾಮಣ್ಣರವರು ಇರಬಹುದು. ಯಾವುದೇ ಕಾರ್ಯಕಲಾಪ ಬರಲಿ, ಯಾವುದೇ ವಿಚಾರ ಬಂದರೂ ಕೂಡ ಚರ್ಚೆಯಾಗಬೇಕು, ಅದಕ್ಕೆ ಒಂದು ತಾರ್ಕಿಕವಾದ ಅಂತ್ಯ ಕಾಣುವ ರಿತಿಯಲ್ಲಿ ಚರ್ಚೆ ಮಾಡಿ, ಚರ್ಚೆಯಲ್ಲಿ ಭಾಗವಹಿಸುತ್ತಿದ್ದಂಥ ಬಿ.ವಿ.ಕಕ್ಕಿಲ್ಲಾಯರವರನ್ನು ನಾವು ಕಳೆದುಕೊಂಡಿದ್ದೇವೆ. ಅದೇ ರೀತಿ, ನೀಲಕಂಠನಗೌಡ ವೀರನಗೌಡ ಪಾಟೀಲ್, ಸುಭಾಷ್ ಅಷ್ಟೂರೆ, ಎಂ. ಗಂಗಣ್ಣ ಭೀಮಪ್ಪ, ಕೆ.ಜಿ.ಶಿವಪ್ಪರವರು ನಿಧನರಾಗಿದ್ದಾರೆ. ಎಂ.ಗಂಗಣ್ಣ ಭೀಮಪ್ಪರವರ ಬಗ್ಗೆ ಒಂದು ಮಾತಿನಲ್ಲಿ ಹೇಳುವುದಾದರೆ, ತಾವು ಈ ಗ್ಯಾಲರಿಯಲ್ಲಿ ಯಾರನ್ನಾದರೂ ನೋಡಿ, ಮಾಜಿ ಶಾಸಕರಾಗಿದ್ದರೂ ಕೂಡ ಎಲ್ಲೋ ಒಂದು ಸಲ ಬರುತ್ತಾರೆ, ಹೋಗುತ್ತಾರೆ ಅಷ್ಟೆ. ಆದರೆ, ಇವರು ಸದನ

ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಬಂದು ವಿರೋಧ ಪಕ್ಷಗಳಲ್ಲಿ ಅವರ ಸ್ನೇಹಿತರು ಕುಳಿತುಕೊಂಡ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಅವರ ಕಿವಿಯಲ್ಲಿ ನೀವು ಇಂಥ ವಿಚಾರವನ್ನು ಪ್ರಸ್ತಾಪ ಮಾಡಿ, ಹೀಗೆ ಮಾಡಿ, ಹೀಗೆ ಮಾತನಾಡಿ ಎನ್ನುವ ಮಾತನ್ನು, ತಿಳುವಳಿಕೆಯನ್ನು ಎಲ್ಲರಿಗೂ ಕೂಡುತ್ತಿದ್ದರು. ನಾವು ಇಲ್ಲಿ ಒಳಗೆ ಬರಬೇಕಾದರೆ mind ಅನ್ನು brush-up ಮಾಡಿ, ನೀವು ಇವತ್ತು ಈ ರೀತಿಯಾಗಿ ಮಾತನಾಡಬೇಕೆಂದು ಹೇಳಿ, ಭುಜ ತಟ್ಟಿ ಪ್ರೋತ್ಸಾಹ ಕೊಡುತ್ತಿದ್ದಂಥ ಒಬ್ಬ ಯುವಕ ಇವತ್ತು ಕಣ್ಮರೆಯಾಗಿದ್ದಾರೆ. ಅವರು ಶಾಸಕರಾಗಿ ಆಯ್ಕೆಯಾಗಿ ಬಂದಾಗ, ಅವರಿಗೆ accident ಆದಾಗ ಅವರು ಉಳಿಯುವುದಿಲ್ಲ ಎನ್ನುತ್ತಿದ್ದರು. ಆಗ ಅವರನ್ನು ನೋಡುವುದಕ್ಕೆಂದೇ ಶ್ರೀಮತಿ ಇಂದಿರಾಗಾಂಧಿ– ಯವರು ದೆಹಲಿಯಿಂದ ಬಂದಿದ್ದರು. ಅಂಥ ಒಬ್ಬ ಯುವಕನನ್ನು ನಾವು ಕಳೆದುಕೊಂಡಿದ್ದೇವೆ. ತಾವು ತಂದಿರುವ ಸಂತಾಪ ಸೂಚನೆಗೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದುದು ಏನೆಂದರೆ, ಇವರೆಲ್ಲ ವಯಸ್ಸಾಗಿ ಸತ್ತಿದ್ದಾರೆ, ಕಾಲಗರ್ಭದಲ್ಲಿ ಸೇರಿದ್ದಾರೆ. ಆದರೆ, ಬದುಕಿದ್ದವರನ್ನೂ ಸಾಯಿಸುವ ಕೆಲಸ ಕೂಡ ತಮ್ಮ ಕಛೇರಿಯಿಂದ ಆಗುತ್ತಿದೆ. ಇದು ಏಕೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಸರಿ ಮಾಡಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾಹಿತಿ ತಂತ್ರಜ್ಞಾನ ಬೆಳೆದಿರುವ ಸಂದರ್ಭದಲ್ಲಿ ಕೂಡ ಒಬ್ಬ ಶಾಸಕರಾಗಿದ್ದವರಿಗೆ ನೀವು ಕೂಡ ಸತ್ತಿದ್ದೀರಿ ಎಂದು ಅವರಿಗೇನಾದರೂ ನಿಮ್ಮ ಕಛೇರಿಯಿಂದ ಕಾಗದ, ಸುತ್ತೋಲೆ ಹೋಗುತ್ತದೆ ಎಂದರೆ ಇದನ್ನು ಏನೆಂದು ಹೇಳಬೇಕು? ಅವರಿಗೆ ಎಷ್ಟು ನೋವು ಆಗುತ್ತದೆ ಹೇಳಿ ಅಧ್ಯಕ್ಷರೆ? ಅವರು ಪತ್ರಿಕೆಯವರ ಮುಂದೆ ಬಂದು ನಾನು ಬದುಕಿದ್ದೇನೆ ಎಂದು ಹೇಳುವ ಮಟ್ಟಕ್ಕೆ ಆಗಬೇಕೆಂದರೆ, ಎಷ್ಟರ ಮಟ್ಟಿಗೆ ನಮ್ಮ Secretariat ಕೆಲಸ ಮಾಡುತ್ತಿದೆ ಎನ್ನುವುದನ್ನು ಎಲ್ಲೋ ಒಂದು ಮಟ್ಟಿಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ಈ ರೀತಿ ಆಗಬಾರದಿತ್ತು.

ಅಧ್ಯಕ್ಷರು: ಹೌದು.

ಶ್ರೀ ಟಿ. ಬಿ. ಜಯಚಂದ್ರ: ಇದು ಒಬ್ಬ ಸಾರ್ವಜನಿಕ ಕ್ಷೇತ್ರದಲ್ಲಿರುವ ಒಬ್ಬ ಪ್ರತಿನಿಧಿಗೆ ಮಾಡುವ ಅವಮಾನ ಎನ್ನುವ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ವಿಧಾನ ಸಭೆಗೆ 60 ವರ್ಷ ತುಂಬಿದ ಪ್ರಯುಕ್ತ ಹೊರತಂದಿರುವ ಸ್ಮರಣ ಸಂಚಿಕೆಯಲ್ಲಿ ವೆಂಕಟರಮಣಪ್ಪ ಫೋಟೋ ಬದಲಿಗೆ ಬೇರೆಯವರ ಫೋಟೋ ಹಾಕಿದ್ದಾರೆ. ನೀವು ನೋಡಿದ್ದೀರಾ?

ಅಧ್ಯಕ್ಷರು: ಇಲ್ಲ, ನೋಡಲಿಲ್ಲ.

ಶ್ರೀ ಸಿದರಾಮಯ್ಯ: ನೋಡಿ, ಅದು ಹಾಗೆಯೇ ಮುಂದುವರಿಯುತ್ತಿದೆ. ಹೆಸರು ಬೇರೆ, ಫೋಟೋ ಯಾರದ್ದೋ ಇದೆ. ವೆಂಕಟರಮಣರವರ ಫೋಟೋವೇ ಇಲ್ಲ. ವೆಂಕಟರಮಣರವರ ಹೆಸರು, ಅವರ ಬಗ್ಗೆ ಲೇಖನ ಇದೆ, ಆದರೆ, ಫೋಟೋ ಮಾತ್ರ ವೆಂಕಟಪ್ಪನವರದ್ದು ಇದೆ. ಎಂಥೆಂಥ ಅನಾಹುತಗಳನ್ನು ನಿಮ್ಮ office ನಲ್ಲಿ ಮಾಡುತ್ತಾರೆ?

ಅಧ್ಯಕ್ಷರು: Seriously ಇದನ್ನು set right ಮಾಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ: ಇದನ್ನು ನೋಡುವುದಿಲ್ಲವೇ? By oversight ಏನೋ ಒಂದು ಬಿಟ್ಟುಹೋಗುತ್ತದೆಂದರೆ I can understand. ಅಷ್ಟೂ ಗೊತ್ತಾಗುವುದಿಲ್ಲವೇ?

ಶ್ರೀ ಟಿ. ಬಿ. ಜಯಚಂದ್ರ: ಬಹುಶಃ ನಿಜವಾಗಿಯೂ ಸತ್ತಿರುವಂಥವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸೋಣ, ಸಂತಾಪ ಸೂಚನೆ ಮಾಡೋಣ. ಬದುಕಿರುವವರಿಗೆ ದಯಮಾಡಿ ಕ್ಷಮಾಪಣೆಯನ್ನು ಕೇಳಿ.

ಅಧ್ಯಕ್ಷರು: ನಿನ್ನೆಯೇ ಪತ್ರ ಬರೆದಿದೆ.

ಶ್ರೀ ಬಿ. ಟಿ. ಜಯಚಂದ್ರ: ತಮ್ಮ ಕಛೇರಿಯಿಂದ ಪತ್ರ ಬರೆದು ಅದನ್ನು ಪತ್ರಿಕೆಗೆ ಬಿಡುಗಡೆ ಮಾಡುವ ಕೆಲಸ ಮಾಡಬೇಕು.

ಅಧ್ಯಕ್ಷರು: ನಿನ್ನೆಯೇ ಮಾಡಿದ್ದೇವೆ.

ಶ್ರೀ ಟಿ. ಬಿ ಜಯಚಂದ್ರ: ಇಂಥ ತಪ್ಪುಗಳು ಆಗದ ರೀತಿಯಲ್ಲಿ ಮಾಡಬೇಕು.

ಅಧ್ಯಕ್ಷರು: ನಿನ್ನೆಯೇ ಕ್ಷಮಾಪಣೆ ಪತ್ರವನ್ನು ಬರೆಯಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ: ಇಂಥ ತಪ್ಪುಗಳು ಆಗದ ರೀತಿಯಲ್ಲಿ ಕ್ರಮವನ್ನು ವಹಿಸಬೇಕೆನ್ನುವ ಮಾತನ್ನು ಹೇಳುತ್ತಾ, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸಿದ್ದೀರಿ. ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಗೋವಿಂದ ನಾರಾಯಣ, ಮಾಜಿ ಸಚಿವರಾದ ಶ್ರೀಯುತ ಕೆ.ಎಂ. ಕೃಷ್ಣಾರೆಡ್ಡಿ, ಕೆ. ಶ್ರೀರಾಮುಲು ಮತ್ತು ಸುಭಾಷ್ ಅಷ್ಟೂರೆ, ವಿಧಾನ-ಸಭೆಯ ಮಾಜಿ ಸದಸ್ಯರಾದ ಎಂ. ನಾಗಪ್ಪ, ಸ್ವಾತಂತ್ರ್ಯ ಹೋರಾಟ-

ಗಾರ್ತಿಯಾಗಿದ್ದ ಶ್ರೀಮತಿ ಭಾಗೀರಥಮ್ಮನವರು, ಎಸ್. ಮುನಿಶ್ಯಾಮಪ್ಪನವರು, ಎಂ.ಹೆಚ್. ಬೆಕಿನಾಳಕರ, ಕೆ.ಜಿ. ಮಹೇಶ್ವರಪ್ಪ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಬಿ.ವಿ. ಕಕ್ಕಿಲ್ಲಾಯ, ನೀಲಕಂಠನಗೌಡ ವೀರನಗೌಡ ಪಾಟೀಲ್, ಎಂ.ಗಂಗಣ್ಣ ಭೀಮಪ್ಪ ಹಾಗೂ ಸಂಸತ್ತಿನ ಮಾಜಿ ಸದಸ್ಯರಾದ ಕೆ.ಜಿ. ಶಿವಪ್ಪನವರು ಹಾಗೂ ನಮ್ಮ ರಾಜ್ಯದ ನ್ಯಾಯಾಧೀಶರಾಗಿದ್ದ ಗೋವಿಂದರಾಜುಲುರವರು ನಿಧನರಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 5 ವರ್ಷಗಳ ಕಾಲ ರಾಜ್ಯಪಾಲರಾಗಿದ್ದ ಗೋವಿಂದ ನಾರಾಯಣರವರು ಪ್ರಾಮಾಣಿಕ ಕೆಲಸ ಮಾಡಿದ್ದಾರೆ. ಅದರ ಜೊತೆಗೆ ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವೀಧರರಾಗಿದ್ದರು. ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿರುವ ದಿವಂಗತರು ICS ಪದವಿಯನ್ನು ಪಡೆದುಕೊಂಡಿದ್ದರು. ಉತ್ತರ ಪ್ರದೇಶದ ಗೃಹ ಕಾರ್ಯದರ್ಶಿಯಾಗಿ, ಅಭಿವೃದ್ಧಿ ಆಯುಕ್ತರಾಗಿ ಮತ್ತು ಆ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ. 1951ರಿಂದ 1954ರವರೆಗೆ ನೇಪಾಳ ರಾಜರಿಗೆ ಆಪ್ತ ಸಲಹೆಗಾರರಾಗಿ 1964ರಲ್ಲಿ ಪಶ್ಚಿಮ ಬಂಗಾಳದಲ್ಲಿ ಸಂಪರ್ಕಾಧಿಕಾರಿಯಾಗಿ, 1973ರಲ್ಲಿ ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುತ್ತಾರೆ.

ಕೆ. ಎಂ. ಕೃಷ್ಣಾರೆಡ್ಡಿಯವರು ನಮ್ಮ ಪಕ್ಷದ ಮುಖಂಡರಾಗಿದ್ದರು. ಕೋಲಾರ ಜಿಲ್ಲೆಯವರು. ಅವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದರು. ಮೂರು ಬಾರಿ ಶಾಸಕರಾಗಿದ್ದರು. ಅವರು ಪ್ರಾಮಾಣಿಕವಾದ ರಾಜಕಾರಣಿಯಾಗಿದ್ದರು ಮತ್ತು ಮಾಜಿ ಮಂತ್ರಿಯಾದವರನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಅದರ ಜೊತೆಗೆ ಮಾಜಿ ಮಂತ್ರಿಗಳಾದ ಕೆ. ಶ್ರೀರಾಮುಲುರವರು ದೇವರಾಜ ಅರಸುರವರ ಸಂಪುಟದಲ್ಲಿ ಮಂತ್ರಿಯಾಗಿದ್ದರು. ಹಾಗೆಯೇ, ಎಂ. ನಾಗಪ್ಪ, ಜಿ.ಸಿ. ಭಾಗೀರಥಮ್ಮನವರಿಗೆ, ಎಂ. ಮುನಿಶ್ಯಾಮಪ್ಪನವರಿಗೆ, ಎಂ.ಹೆಚ್. ಬೆಕಿನಾಳಕರವರಿಗೆ, ನೀಲಕಂಠನಗೌಡ ವೀರನಗೌಡ ಪಾಟೀಲ್‌ರವರಿಗೆ ಮತ್ತು ಕೆ.ಜಿ. ಮಹೇಶ್ವರಪ್ಪನವರಿಗೆ, ಬಿ.ವಿ.ಕಕ್ಕಿಲ್ಲಾಯರವರಿಗೆ, ಸುಭಾಷ್ ಅಷ್ಟೂರೆಯವರಿಗೆ, ಎಂ. ಗಂಗಣ್ಣ ಭೀಮಪ್ಪರವರಿಗೆ ಮತ್ತು ಉಳಿದ ದಿವಂಗತರ ಬಗ್ಗೆ ತಾವು ಸಂತಾಪ ಸೂಚನೆ ತಂದಿದ್ದೀರಿ. ಅದನ್ನು ಬೆಂಬಲಿಸುತ್ತೇನೆ. ದಿವಂಗತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬದವರಿಗೆ ಮೃತರ ದುಃಖ ಭರಿಸುವ ಶಕ್ತಿ ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅದರ

ಜೊತೆಗೆ ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಗೋವಿಂದರಾಜುಲು ಮತ್ತು ಅವರ ಕುಟುಂಬದವರು ಆಕಸ್ಮಿಕ ಅಪಘಾತದಲ್ಲಿ ಮೃತರಾಗಿದ್ದಾರೆ. ಅವರ ಕುಟುಂಬಕ್ಕೂ ಮೃತರ ದುಃಖ ಭರಿಸುವ ಶಕ್ತಿ ಕೊಡಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪ್ರತಾಪ ಗೌಡ ಪಾಟೀಲ್ (ಮಸ್ಕಿ): ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಹಿಂದಿನ ಅಧಿವೇಶನದಿಂದ ಇಲ್ಲಿಯವರೆಗೆ ನಿಧನರಾಗಿರತಕ್ಕಂಥ ಮಹನೀಯರಲ್ಲಿ ರಾಜ್ಯದ ಮಾಜಿ ರಾಜ್ಯಪಾಲರಾಗಿರುವಂಥ ಶ್ರೀ ಗೋವಿಂದ ನಾರಾಯಣರವರು, ಮಾಜಿ ಸಚಿವರಾಗಿರುವಂಥ ಶ್ರೀ ಕೆ.ಎಂ.ಕೃಷ್ಣಾರೆಡ್ಡಿಯವರು,ಶ್ರೀ ಕೆ. ಶ್ರೀರಾಮುಲುರವರು, ಶ್ರೀ ಸುಭಾಷ್ ಅಷ್ಟೂರೆಯವರು, ವಿಧಾನ ಸಭೆಯ ಸದಸ್ಯರಾಗಿರುವಂಥ ಶ್ರೀ ಎಂ.ನಾಗಪ್ಪನವರು,ಶ್ರೀಮತಿ ಜೆ.ಸಿ.ಭಾಗೀರಥಮ್ಮನವರು, ಶ್ರೀ ಮುನಿ-ಶ್ಯಾಮಪ್ಪನವರು, ಶ್ರೀ ಎಂ.ಹೆಚ್.ಬೆಕಿನಾಳಕರರವರು,ಶ್ರೀ ಕೆ.ಜಿ.ಮಹೇಶ್ವರಪ್ಪ-ನವರು, ಶ್ರೀ ಬಿ.ವಿ.ಕಕ್ಕಿಲ್ಲಾಯರವರು, ಶ್ರೀ ನೀಲಕಂಠಗೌಡ ವೀರನಗೌಡ ಪಾಟೀಲ್‌ರವರು, ಶ್ರೀ ಎಂ.ಗಂಗಣ್ಣನವರು, ಮಾಜಿ ಸಂಸದರಾದ ಶ್ರೀ ಕೆ.ಜೆ,ಶಿವಪ್ಪನವರು, ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ನಮ್ಮ ಜಿಲ್ಲೆಯವರಾದ ಲಿಂಗಸೂರು ತಾಲ್ಲೂಕಿನವರಾದ ಶ್ರೀಯುತ ಎಂ.ಗಂಗಣ್ಣನವರು ಲಿಂಗಸೂರು ತಾಲ್ಲೂಕಿನ ಮುದುಗಲ್ ಪಟ್ಟಣದಲ್ಲಿ ದಿನಾಂಕ: 05-05-1951 ರಲ್ಲಿ ಜನಿಸಿ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಅಲ್ಲಿ ಮುಗಿಸಿ ಕಾನೂನು ಪದವೀಧರರಾಗಿ ನಂತರ ತಮ್ಮ ವಕೀಲ ವೃತ್ತಿಯನ್ನು ಪ್ರಾರಂಭ ಮಾಡಿದರು. 1978 ರಲ್ಲಿ 6ನೇ ವಿಧಾನ ಸಭೆಗೆ ಕುಷ್ಟಗಿ ವಿಧಾನ ಸಭೆಯಿಂದ ಆಯ್ಕೆಯಾಗಿ ಈ ಒಂದು ವಿಧಾನ ಸಭೆಯ ಸದಸ್ಯರಾಗಿ ಅವರೊಬ್ಬ ಆದರ್ಶ ಶಾಸಕರಾಗಿ ಕಾರ್ಯವನ್ನು ನಿರ್ವಹಿಸಿದರು. ಇವತ್ತು ಅವರ ಆದರ್ಶಗಳು ನಮ್ಮ ಮುಂದಿವೆ. ಏಕೆಂದರೆ, ಅವರು ತಮ್ಮ ಶಾಸಕರಾಗಿದ್ದ ಅವಧಿಯಲ್ಲಿ ಅನೇಕ ಸಂಘ-ಸಂಸ್ಥೆಗಳನ್ನು ಹುಟ್ಟು ಹಾಕಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳನ್ನು ತೆಗೆಯುವುದರ ಮೂಲಕ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಶಿಕ್ಷಣಸಂಸ್ಥೆಗಳನ್ನು ಪ್ರಾರಂಭಿಸಿದರು. ಮಾಜಿ ಶಾಸಕರಾದರೂ ಸಹ ರಾಜಕೀಯದ ನಂಟನ್ನು ಇಟ್ಟುಕೊಂಡು ಮುಂಬರುವಂಥ ಶಾಸಕರಿಗೆ ಒಬ್ಬ ಆದರ್ಶ ಶಾಸಕರಾಗಿ ಹೇಗೆ ಕಾರ್ಯ ನಿರ್ವಹಿಸಬೇಕು ಎಂದು ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಅವರು ಕೆಲಸ ಮಾಡುತ್ತಿದ್ದರು. ನಾನು ಶಾಸಕನಾದ ನಂತರವೂ ಬೆಂಗಳೂರಿನಲ್ಲಿ ಶಾಸಕರ ಭವನದಲ್ಲಿ ಅವರು

ಯಾವಾಗಲೂ ಭೇಟಿಯಾಗಿತ್ತಿದ್ದರು. ಆ ಅವಧಿಯಲ್ಲಿ ಶಾಸಕರು ಯಾವ ರೀತಿಯಲ್ಲಿ ನಡೆವಳಿಯಲ್ಲಿ ನಡೆದುಕೊಳ್ಳಬೇಕು, ಏನು ಕೆಲಸ ಮಾಡಬೇಕೆಂದು ಅವರೇನು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು ಅದು ನಮಗೆ ಅವರ ಒಂದು ಆದರ್ಶವೆಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ, ಮನುಷ್ಯನ ಹುಟ್ಟು ಅನಿಶ್ಚತೆ ಸಾವು ನಿಶ್ಚಿತ. ಆ ಹುಟ್ಟು ಸಾವಿನ ನಡುವೆ ಅವರು ಹಾಕಿ ಕೊಟ್ಟಿರುವ ಮಾರ್ಗದರ್ಶನಗಳು, ಆದರ್ಶಗಳು, ಇವತ್ತು ನಮಗೆ ದಾರಿದೀಪವಾಗಬೇಕಾಗಿದೆ. ಅಂಥ ಮಾನ್ಯ ಗಂಗಣ್ಣನವರು ದಿನಾಂಕ: 12–07–2012 ರಂದು ಲಿಂಗೈಕ್ಯರಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗಕ್ಕೆ ಆ ದುಃಖವನ್ನು ಭರಿಸುವ ಶಕ್ತಿ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ):– ತಾವು ತಂದಿರತಕ್ಕಂಥ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲ ಕೊಡುತ್ತಾ, ವಿಶೇಷವಾಗಿ ಇಂದಿನ ಸಂತಾಪ ಸೂಚನೆಯಲ್ಲಿ ಈ ರಾಜ್ಯದ ಮಾಜಿ ರಾಜ್ಯಪಾಲರಾಗಿರತಕ್ಕಂಥ ಶ್ರೀ ಗೋವಿಂದ ನಾರಾಯಣ ರವರು, ಮಾಜಿ ಸಚಿವರುಗಳಾಗಿದ್ದಂಥ ಶ್ರೀ ಕೆ.ಎಂ.ಕೃಷ್ಣಾರೆಡ್ಡಿ–ಯವರು, ಶ್ರೀ ಕೆ.ಶ್ರೀರಾಮುಲು ಮತ್ತು ಶ್ರೀ ಸುಭಾಷ್ ಅಷ್ಟೂರೆಯವರು, ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದಂಥ ಶ್ರೀ ಎಂ.ನಾಗಪ್ಪನವರು, ಶ್ರೀಮತಿ ಜೆ.ಸಿ.ಭಾಗೀರಥಮ್ಮನವರು, ಶ್ರೀ ಎಸ್.ಮುನಿಶ್ಯಾಮಪ್ಪನವರು, ಶ್ರೀ ಎಂ,ಹೆಚ್.–ಬೆಕಿನಾಳಕರರವರು, ಶ್ರೀ ಕೆ.ಜಿ.ಮಹೇಶ್ವರಪ್ಪನವರು, ಶ್ರೀ ಬಿ.ವಿ.ಕಕ್ಕಿಲ್ಲಾಯ, ಶ್ರೀ ನೀಲಕಂಠನಗೌಡ ವೀರನಗೌಡ ಪಾಟೀಲ್, ಶ್ರೀ ಎಂ.ಗಂಗಣ್ಣ ಭೀಮಪ್ಪ ಹಾಗೂ ಸಂಸತ್‌ನ ಮಾಜಿ ಸದಸ್ಯರಾಗಿದ್ದಂಥ ಕೆ.ಜಿ.ಶಿವಪ್ಪ ಇವರುಗಳು ನಿಧನ ಹೊಂದಿರುವುದು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಾವು ತಂದಿರತಕ್ಕ ಸಂತಾಪ ಸೂಚನೆಯನ್ನು ನಾನು ಬೆಂಬಲಿಸುತ್ತಿದ್ದೇನೆ. ಪ್ರಮುಖವಾಗಿ ಮಾಜಿ ರಾಜ್ಯಪಾಲರಾದ ಗೋವಿಂದ ನಾರಾಯಣರವರು ಬಹಳ ಅತ್ಯಂತ ಹಿರಿಯರಾಗಿದ್ದು ಮೌಲ್ಯಗಳ ಆಧಾರಿತವಾದಂಥ ಒಂದು ಜೀವನವನ್ನು ನಡೆಸುವ ಮುಖಾಂತರ ಬಹಳ ಗೌರವಾನ್ವಿತ ರಾಜ್ಯಪಾಲರ ಹುದ್ದೆಯಲ್ಲಿದ್ದು ಆ ಹುದ್ದೆಯ ಘನತೆ ಗೌರವಗಳನ್ನು ಕಾಪಾಡತಕ್ಕಂಥ ಒಂದು ಮಾದರಿಯ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು ಎನ್ನುವ ಮಾತನ್ನು ಹೇಳುತ್ತಿದ್ದರು. ನಾವು ಆಗ ತಾನೇ 1983 ರಲ್ಲಿ ಪ್ರಥಮವಾಗಿ ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದೆವು. ಆಗ ತಾನೇ ಅವರು ನಿವೃತ್ತಿಯಾಗತಕ್ಕಂಥ ಸಂದರ್ಭ. ಆ ಸಂದರ್ಭದಲ್ಲಿ ಅವರ ವಿಚಾರದ ಬಗ್ಗೆ ಅವರ ಆಡಳಿತ, ಅನುಭವ, ಅವರು

ನಡೆದು ಬಂದಂಥ ದಾರಿ, ಆ ಸ್ಥಾನದ ಘನತೆ ಗೌರವದ ರಕ್ಷಣೆ ಮಾಡಿಕೊಂಡು ಬಂದಂಥ ಒಬ್ಬ ವಿಶೇಷವಾದ ಗೌರವಾನ್ವಿತರು ಎನ್ನತಕ್ಕಂಥ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಅಂಥ ಗೌರವಾನ್ವಿತರು ನಮ್ಮ ರಾಜ್ಯದಲ್ಲಿ ರಾಜ್ಯಪಾಲರಾಗಿ ಸುಮಾರು ಐದು ವರ್ಷಗಳ ಕಾಲ ಸೇವೆ ಮಾಡಿದ್ದಾರೆ. ಅವರ ನಿಧನ, ಅದರಲ್ಲೂ ಅವರ ಮೌಲ್ಯಧಾರಿತ ಜೀವನ ಮತ್ತು ಅವರ ಅನುಭವಗಳು ಈ ರಾಜ್ಯಕ್ಕೆ ಮತ್ತು ಈ ರಾಷ್ಟ್ರಕ್ಕೆ ಬಹಳ ಕೊಡುಗೆಯಾಗಿ ಕೊಟ್ಟಿರುವುದನ್ನು ನಾವಿಂದು ಸ್ಮರಣೆ ಮಾಡಬೇಕಾಗಿದೆ. ಅವರು ಬಹಳ ಸುದೀರ್ಘವಾದ ಜೀವನ ನಡೆಸಿಕೊಂಡು ಬಂದಿದ್ದಾರೆ. ಅವರು ಸುಮಾರು 1916 ರಲ್ಲಿ ಹುಟ್ಟಿದ್ದು ಅವರು 2012 ರಲ್ಲಿ ನಿಧನರಾದರು. ಅವರು ಸುಮಾರು 95–96 ವರ್ಷಗಳ ಕಾಲ ಜೀವಂತವಾಗಿದ್ದು ಈ ರಾಷ್ಟ್ರಕ್ಕೆ ಅಪಾರವಾದಂಥ ಸೇವೆ ಸಲ್ಲಿಸಿದಂಥವರು. ಅವರು ಅನೇಕ ವಿವಿಧ ಹುದ್ದೆಗಳನ್ನು ಅನುಭವಿಸಿದ್ದಾರೆ. ನಮ್ಮ ಜಿಲ್ಲೆಯವರಾದ ಶ್ರೀ ಕೆ.ಎಂ. ಕೃಷ್ಣಾರೆಡ್ಡಿಯವರ ವಿಚಾರ ಈಗಾಗಲೇ ಪ್ರಸ್ತಾಪವಾಯಿತು. ಅವರೊಬ್ಬ ಹುಟ್ಟು ಹೋರಾಟಗಾರರು. ಅವರು ತಮ್ಮ ವಿದ್ಯಾರ್ಥಿ ದೆಸೆಯಿಂದಲೇ ಹೋರಾಟದ ಮುಖಾಂತರ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿ ಆಗ Expo–70 ವಿರುದ್ಧವಾಗಿ ಹೋರಾಟ ಮಾಡಿ ಅವತ್ತಿನಿಂದ ಅವರು ತಮ್ಮನ್ನು ತಾವು ಹೋರಾಟಗಾರರಾಗಿ ತೊಡಗಿಸಿಕೊಂಡು ರಾಜಕೀಯ ಪ್ರವೇಶ ಮಾಡಿದಂಥವರು. ಅವರು ಒಳ್ಳೆಯ ಹಿರಿಯ ವಕೀಲರಾಗಿ ಉತ್ತಮವಾದಂಥ ಸೇವೆ ಮಾಡುತ್ತಿದ್ದರು. ಅವರು ಉತ್ತಮ ನ್ಯಾಯವಾದಿ–ಗಳಾಗಿದ್ದರು. ನಾನು ಸಹ ನನ್ನದು ಯಾವುದಾದರೂ ಒಂದು ವಿವಾದ ಇದ್ದರೆ ಅವರನ್ನೇ ನಾನು ವಕೀಲರಾಗಿ ನೇಮಕ ಮಾಡುವ ಅವಕಾಶ ನನಗೆ ಒದಗಿ ಬಂದಿತ್ತು. ಇಂಥ ಸಂದರ್ಭದಲ್ಲಿ ನಾನು ಅವರ ಜೊತೆಗೆ ಬಹಳ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ಎರಡು ಬಾರಿ ಅವರು ಶಾಸಕರಾಗಿದ್ದಾಗಲೂ ಮಂತ್ರಿಗಳಾಗಿ ಕೆಲಸ ಮಾಡಿದ್ದರು. ಒಳ್ಳೆಯ ಉತ್ತಮವಾದಂಥ ಜನಾನುರಾಗಿಯಾಗಿ, ಯಾವುದೇ ರಾಗ–ದ್ವೇಷ ಇಟ್ಟುಕೊಳ್ಳುತ್ತಿರಲಿಲ್ಲ. ಕೋಪ ಬಂದಾಗ ಆ ರೀತಿ ಮಾತನಾಡುತ್ತಿದ್ದರು, ತದನಂತರದಲ್ಲಿ ಅಷ್ಟೇ ಪ್ರೀತಿ ವಿಶ್ವಾಸದಿಂದ ಎಲ್ಲರನ್ನೂ ಅವರು ಇಟ್ಟುಕೊಂಡು ಅವರೊಬ್ಬ ಜನಾನುರಾಗಿ–ಯಾಗಿ ಬೆಳೆದು ಬಂದಂಥ ರಾಜಕಾರಣಿಯಾಗಿದ್ದರು. ಇವರು ನಮ್ಮನ್ನು ಆಗಲಿರುವುದರಿಂದ ನಮ್ಮೆಲ್ಲರಿಗೆ ಅಪಾರವಾದಂಥ ನಷ್ಟವಾಗಿದೆ. ನಮ್ಮ ಕ್ಷೇತ್ರದವರೇ ಆಗಿದ್ದ ಮಾನ್ಯ ಮುನಿಸ್ವಾಮಿಪ್ಪನವರು ಅವರು ಮೂರು ಬಾರಿ ಎಂಎಲ್ಎ ಆಗಿ ಸೇವೆ ಸಲ್ಲಿಸಿದ್ದರು. ಅವರು ಮೊದಲು ನಮ್ಮ ಪಕ್ಷದಲ್ಲಿದ್ದರು. ಅವರು ಪ್ರಥಮವಾಗಿ ಕಾಂಗ್ರೆಸ್ ಪಕ್ಷದಲ್ಲಿ ಶಾಸಕರಾಗಿ ಗೆದ್ದರು. ಆ

ಸಂದರ್ಭದಲ್ಲಿ ನಾವೆಲ್ಲಾ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅವಕಾಶವೂ ಇತ್ತು. ತದನಂತರ ರಾಜಕೀಯಲ್ಲಾದ ಬದಲಾವಣೆಯಲ್ಲಿ ಅವರು ಬೇರೆ ಪಕ್ಷಕ್ಕೆ ಹೋಗಿ ಎರಡು ಬಾರಿ ಗೆದ್ದರು. ಇವರ ನಿಧನದಿಂದ ಅವರ ಕುಟುಂಬಕ್ಕೆ ಅವರ ತಾಲ್ಲೂಕಿಗೆ ನಮಗೆ ಅವರ ಅನುಭವ ಇನ್ನು ಬೇಕಾಗಿತ್ತು. ಇವರ ನಿಧನದಿಂದಾಗಿ ಅಪಾರವಾದಂಥ ನಷ್ಟವಾಗಿದೆ. ತಾವು ಏನು ಇಲ್ಲಿ ಪ್ರಸ್ತಾಪ ಮಾಡಿದಿರಿ ಈ ಎಲ್ಲಾ ಗಣ್ಯರೆಲ್ಲರನ್ನು ನಾವು ಸ್ಮರಣೆ ಮಾಡಿಕೊಂಡು ಅವರ ನಿಧನದಿಂದ ಅವರ ಅಗಲಿಕೆಯಿಂದುಂಟಾದ ಅವರ ಕುಟುಂಬಗಳಿಗೆ ಆ ನೋವನ್ನು ನಿಗ್ರಹಿಸತಕ್ಕಂಥ ಶಕ್ತಿ ಆ ಭಗವಂತ ಕೊಡಲಿ ಎಂದು ಹಾಗೂ ಆ ಕುಟುಂಬದವರಿಗೆ ಮುಂದಿನ ಜೀವನ ಒಳ್ಳೆಯದಾಗಲಿ ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ರಾಜೇಶ್ ಖನ್ನಾ ರವರ ಬಗ್ಗೆ.. ಕುಳಿತುಕೊಳ್ಳಿ.

ಶ್ರೀ ಯು. ಟಿ. ಖಾದರ್ (ಮಂಗಳೂರು):– ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಬಿ.ವಿ.ಕಕ್ಕಿಲ್ಲಾಯರವರ ಬಗ್ಗೆ ಒಂದೆರಡು ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಸುಮಾರು ಜನ ಸದಸ್ಯರು ಬಹಳ ಜನ ಇಲ್ಲಿ ಹೆಸರುಗಳನ್ನು ಕೊಟ್ಟಿದ್ದಾರೆ.

ಶ್ರೀ ಯು. ಟಿ. ಖಾದರ್: ಅವರ ಬಗ್ಗೆ ಯಾರೊಬ್ಬರು ಮಾತನಾಡಲಿಲ್ಲ. ಒಂದು ಮಿನಿಟ್ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಅವರು ಮಾತನಾಡಲಿ ನಂತರ ನೀವು ಮಾತನಾಡಿ. ಆಯಿತು ಖಾದರ್‌ರವರೆ ತಾವು ಮಾತನಾಡಿ. ಒಂದು ನಿಮಿಷದಲ್ಲಿ ಮುಗಿಸಿ.

ಶ್ರೀ ಯು. ಟಿ. ಖಾದರ್ (ಮಂಗಳೂರು):– ಸನ್ಮಾನ್ಯ ಸಭಾಧ್ಯಕ್ಷರೆ, ತಾವು ತಂದ ಸಂತಾಪ ಸೂಚನೆ ನಿಲುವಳಿಗೆ ನನ್ನ ಸಹಮತ ವ್ಯಕ್ತಪಡಿಸುತ್ತಾ, ತಾವು ಯಾರನ್ನೆಲ್ಲಾ ಹೆಸರಿಸಿದ್ದೀರೊ ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೇಳಿಕೊಂಡು, ವಿಶೇಷವಾಗಿ ನಮ್ಮ ಜಿಲ್ಲೆಯ ಹಿರಿಯರು ಸ್ವಾತಂತ್ರ್ಯ ಹೋರಾಟಗಾರರು ರಾಜ್ಯ ಸಭೆ ಸದಸ್ಯರಾಗಿ, ಶಾಸಕರಾಗಿದ್ದರು. ಅವರ ಬಗ್ಗೆ ನಾನು ಮತನಾಡಲಿಕ್ಕೆ ಅತಿ ಸಣ್ಣವನಾಗಿದ್ದರೂ ಕೂಡ ಅವರು ನನ್ನ ತಂದೆಯವರ ಜೊತೆ ಮತ್ತು ಬಿ.ಎ.ಮೊಹಿದ್ದೀನ್‌ರವರ ಜೊತೆಗೆ ಸುಬ್ಬಯ್ಯ ಶೆಟ್ಟಿಯವರ ಜೊತೆಗೆಲ್ಲ ಪರಿಚಿತರಾಗಿದ್ದಾರೆ. ಬಹುಶಃ ಅತ್ಯಂತ ಶ್ರೀಮಂತ

ವರ್ಗದಲ್ಲಿ ಜನಿಸಿ ಅತ್ಯಂತ ಮೇಲ್ವರ್ಗದ ಸಮುದಾಯದಲ್ಲಿ ಜನಿಸಿ ಈ ಸಮಾಜದ ಅತ್ಯಂತ ಶೋಷಿತವರ್ಗ ಮತ್ತು ಜನ ಸಾಮಾನ್ಯರ ಪರವಾಗಿ ತಮ್ಮ ಕಾಳಜಿ ವಹಿಸಿಕೊಂಡು ತಮ್ಮ ದೀರ್ಘವಾದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಯಾವುದೇ ಒಂದು ಕಳಂಕ ಬರದ ರೀತಿಯಲ್ಲಿ ತಮ್ಮ ಕಾರ್ಯಚಟುವಟಿಕೆಯನ್ನು ನಡೆಸುತ್ತಿರುವುದು ಬಹುಶಃ ನಮಗೆಲ್ಲರಿಗೂ ಮಾದರಿ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಜಾತ್ಯಾತೀತ ಸ್ವರೂಪವಾಗಿ ಶ್ರೀ ಬಿ.ಎ. ಕಕ್ಕಿಲ್ಲಾಯ ರವರು ಇದ್ದರು ಎಂದು ನಾನು ಹೇಳುವುದಕ್ಕೆ ಹೆಮ್ಮೆಪಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಅವರ ಬಗ್ಗೆ ಹೆಚ್ಚು ಮಾತನಾಡಲಿಕ್ಕೆ ಸಮಯ ಇಲ್ಲದಿದ್ದರೂ ಕೂಡ ಕಡಿಮೆ ಸಮಯಾವಕಾಶ ಕೊಡುತ್ತಿರುವ ಸಂದರ್ಭದಲ್ಲಿ ಒಂದೇ ಮಾತು ಬಹುಶಃ ನಮ್ಮ ಯುವ ಜನಾಂಗ, ಯುವ ರಾಜಕಾರಣಿಗಳು ಬಿ.ಎ.ಕಕ್ಕಿಲ್ಲಾಯರವರನ್ನು ಅರ್ಥಮಾಡಿಕೊಂಡು ನಮ್ಮ ಸಾಮಾಜಿಕ ರಾಜಕೀಯದ ಭವಿಷ್ಯದಲ್ಲಿ ಮುಂದೆ ಇಟ್ಟರೆ ಈ ಸಮಾಜಕ್ಕೆ ಮತ್ತು ಈ ರಾಜ್ಯಕ್ಕೆ ತುಂಬಾ ಒಳಿತಾಗುತ್ತದೆ ಎಂದು ಹೇಳಿಕೊಂಡು ಶ್ರೀ ಬಿ.ಎ.ಕಕ್ಕಿಲ್ಲಾಯ ರವರಿಗೆ ಮತ್ತು ಇಲ್ಲಿ ಹೆಸರಿರುವ ಎಲ್ಲರಿಗೂ ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಕೂಡ ಆ ನೋವನ್ನು ಮರೆಯುವಂಥ ಶಕ್ತಿ ಆ ಭಗವಂತನು ಕೊಡಲಿ ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಸಿ. ನಾಗೇಶ್ (ತಿಪಟೂರು):– ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಸಂತಾಪ ಸೂಚನೆ ಪ್ರಸ್ತಾವನೆಗೆ ನಾನು ಸಹ ಸಪೋರ್ಟ್ ಮಾಡುತ್ತೇನೆ. ತಿಪಟೂರಿನ ಮಾಜಿ ಶಾಸಕರಾಗಿದ್ದಂಥ ಶ್ರೀ ಬಿ.ಎಲ್.ಶಿವಪ್ಪನವರು ಇವತ್ತು ಬೆಳಿಗ್ಗೆ ದೈವಾಧೀನರಾಗಿದ್ದಾರೆ. ಶ್ರೀಯುತರು ಎರಡು ಬಾರಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ತಾವು ತಂದಿರುವ ಪ್ರಸ್ತಾಪದಲ್ಲಿ ಅವರ ಹೆಸರನ್ನು ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಶ್ರೀ ಬಿ.ಎಲ್.ಶಿವಪ್ಪನವರು ತಿಪಟೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ತಮ್ಮ ಜೀವನವನ್ನು ಸಹಕಾರ ಕ್ಷೇತ್ರದ ಮೂಲಕ ಪ್ರಾರಂಭ ಮಾಡಿದ್ದರು. ಪಿ.ಎಸ್.ಪಿ. ಮೂಲಕ ಮೊದಲ ಬಾರಿಗೆ ಶಾಸಕರಾಗಿ ತಿಪಟೂರಿನಲ್ಲಿ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. 1978ರಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ ಆಯ್ಕೆ ಆಗಿ ಕೆಲಸ ಮಾಡಿದ್ದಾರೆ. ತಾಲ್ಲೂಕು ಬೋರ್ಡ್ ಮತ್ತು ಎಪಿಎಂಸಿ ಅಧ್ಯಕ್ಷರಾಗಿ ತಿಪಟೂರಿನಲ್ಲಿ ಜ್ವಾಪಿಸಿಕೊಳ್ಳುವಂಥ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ. ಶ್ರೀಯುತರ ಆತ್ಮಕ್ಕೆ ಮತ್ತು ತುಮಕೂರು

ಜಿಲ್ಲೆಯವರು ಆಗಿರುವ ಶ್ರೀ ಎಂ.ನಾಗಪ್ಪ ಮತ್ತು ಶ್ರೀಮತಿ ಜಿ.ಸಿ.ಭಾಗೀರಥಮ್ಮರವರು ಹಾಗೂ ತಾವೂ ತಂದಿರುವ ಸಂತಾಪ ಸೂಚನೆಯಲ್ಲಿರುವವರೆಲ್ಲರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಾ ತಮ್ಮ ಸಂತಾಪ ಸೂಚನೆಗೆ ನಾನು ಬೆಂಬಲ ಕೊಡುತ್ತೇನೆ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್ (ಹುನಗುಂದ):– ಮಾನ್ಯ ಅಧ್ಯಕ್ಷರೆ, ಇವತ್ತು ತಾವು ತಂದಿರುವಂಥ ಸಂತಾಪ ಸೂಚನೆಯಲ್ಲಿ ನಾನು ಸಹ ಭಾಗವಹಿಸಿ ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಈ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದಂಥ ಶ್ರೀ ಗೋವಿಂದ ನಾರಾಯಣರವರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಕೃಷ್ಣಾರೆಡ್ಡಿಯವರು ಹಾಗೂ ವಿಶೇಷವಾಗಿ ಶ್ರೀ ಸುಭಾಷ್ ಅಷ್ಟೂರೆರವರ ಬಗ್ಗೆ ಹೇಳುವುದಾದರೆ, ನಾನು ವಿದ್ಯಾರ್ಥಿಯಾಗಿದ್ದಂಥ ಸಂದರ್ಭದಲ್ಲಿ ನನ್ನ ಮಾವನವರಾಗಿದ್ದ ದಿವಂಗತ ಸಿ.ಎಲ್.ಪಾಟೀಲ್‌ರವರು ಅರಣ್ಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಶ್ರೀ ಸುಭಾಷ್ ಅಷ್ಟೂರೆರವರು ಸಹ ಸಣ್ಣ ನೀರಾವರಿ ಇಲಾಖೆಯ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ನೀನು ಚೆನ್ನಾಗಿ ಅಭ್ಯಾಸ ಮಾಡಬೇಕು, ಚೆನ್ನಾಗಿ ಓದಿ ಜೀವನದಲ್ಲಿ ಮುಂದೆ ಬರಬೇಕೆಂದು ಶ್ರೀಯುತರು ಹೇಳಿದ ಮಾತು ಇವತ್ತೂ ಕೂಡ ನನಗೆ ನೆನಪು ಬರುತ್ತದೆ. ಮತ್ತೆ ಲಿಂಗಸೂರು ತಾಲ್ಲೂಕಿನ ಮುದ್ಗೋಲ್ ಗ್ರಾಮದವರಾಗಿರುವ ಶ್ರೀ ಎಂ.ಗಂಗಣ್ಣ ಭಿಮಪ್ಪನವರು ಕೂಡ ನಮ್ಮ ಕ್ಷೇತ್ರದವರಾಗಿದ್ದರು. ಶ್ರೀಯುತರು 1978ರಲ್ಲಿ ಕುಷ್ಟಗಿ ಮತ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ನಂತರ ವಿಶೇಷವಾಗಿ ಇವರು ಹಿಂದುಳಿದ ವರ್ಗದವರಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ಮೂಡಿಸಿದಂಥ ಶಕ್ತಿ ಎಂದು ಇವರು ಹೇಳಿದರೂ ಕೂಡ ತಪ್ಪಾಗುವುದಿಲ್ಲ. ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಅವರು 2004ರಲ್ಲಿ ನಾನು ಶಾಸಕನಾದ ನಂತರ ಸಾಕಷ್ಟು ಮಾಹಿತಿಗಳನ್ನು ತೆಗೆದುಕೊಂಡು ಬಂದು ನಮಗೆ ಕೊಡುತ್ತಿದ್ದರು. ಈ ಒಂದು ರಾಜಕೀಯ ಜೀವನದಲ್ಲಿ ಮತ್ತು ನಮ್ಮನ್ನು ಆರಿಸಿ ಕಳುಹಿಸಿದಂಥ ನಮ್ಮ ಕ್ಷೇತ್ರದ ಜನತೆಗೆ ಉಪಕಾರ ಮಾಡಬೇಕಾದರೆ ಒಬ್ಬ ಶಾಸಕನಾಗಿ ನಾವು ಯಾವ ರೀತಿಯಾಗಿ ಕೆಲಸ ಮಾಡಬೇಕೆಂದು ಮಾರ್ಗದರ್ಶನ ಕೊಟ್ಟ ಶ್ರೀ ಎಂ.ಗಂಗಣ್ಣನವರು ನಮ್ಮ ಜೊತೆಯಲ್ಲಿ ಇವತ್ತಿಲ್ಲ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದರ ಜೊತೆಗೆ ಇವರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸುವಂಥ ಶಕ್ತಿಯನ್ನು ಅವರ ಕುಟುಂಬವರ್ಗಕ್ಕೆ ದೇವರು ಕೊಡಲೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬಂಗಾರಪೇಟೆ):– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ತಾವು ತಂದಿರುವಂಥ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ಕೊಡುತ್ತೇನೆ. ಇವತ್ತು ಅನೇಕ ಮಹನೀಯರು ನಿಧನರಾಗಿದ್ದಾರೆ. ಅದರಲ್ಲಿ ವಿಶೇಷವಾಗಿ ಶ್ರೀ ಗೋವಿಂದ ನಾರಾಯಣರವರು ಮತ್ತು ಶ್ರೀ ಕೆ.ಎಂ.ಕೃಷ್ಣಾರೆಡ್ಡಿಯವರು ಸಹ ನಿಧನರಾಗಿದ್ದಾರೆ. ಶ್ರೀ ಕೆ.ಎಂ.ಕೃಷ್ಣಾರೆಡ್ಡಿಯವರು ನಮ್ಮ ಜಿಲ್ಲೆಯವರಾಗಿದ್ದಾರೆ. ನಾನು 1989ರಲ್ಲಿ ಪ್ರಥಮ ಬಾರಿಗೆ ಶಾಸನಸಭೆಗೆ ಪ್ರವೇಶ ಮಾಡಿದಂಥ ಸಂದರ್ಭದಲ್ಲಿ ಅವರು ನನಗೆ ಬೆನ್ನುತಟ್ಟಿದ್ದರು. 2004ರಲ್ಲಿ ನಾನು ಮತ್ತು ಅವರೂ ಸಹ ಗೆದ್ದು ಬಂದೆವು. ಅವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದರು. ಶ್ರೀಯುತರ ಒಡನಾಡಿಯಾಗಿ ಸುಮಾರು 20 ವರ್ಷಗಳ ಕಾಲ ಅವರ ಜೊತೆಯಲ್ಲಿದ್ದೆ. ರಾಜಕೀಯ, ಜಾತಿ ಹಾಗೂ ಅನೇಕ ವಿಷಯಗಳ ಬಗ್ಗೆ ಶ್ರೀಯುತರು ನಮಗೆ ಒಳ್ಳೆಯ ಮಾರ್ಗದರ್ಶನ ಕೊಡುತ್ತಿದ್ದರು. ನಾವಿಬ್ಬರೂ ಜೊತೆಯಾಗಿ ಅನೇಕ ಕೆಲಸಗಳನ್ನು ಸಹ ಮಾಡಿದ್ದೇವೆ. ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಬೈರೇಗೌಡರಿಗೆ ಮಂತ್ರಿಗಿರಿ ಕೊಟ್ಟಿದ್ದರು. ಆದರೆ, ಇವರಿಗೆ ಮಂತ್ರಿಗಿರಿ ಕೊಟ್ಟರಲಿಲ್ಲ. ಆದರೆ, ಮಾನ್ಯ ಜೆ.ಹೆಚ್. ಪಟೇಲ್‌ನವರು ಮುಖ್ಯಮಂತ್ರಿಯಾದ ನಂತರ ಇವರಿಗೆ ಮಂತ್ರಿ ಸ್ಥಾನ ಸಿಕ್ಕಿತು. ಮಾನ್ಯ ದೇವೇಗೌಡರು ನನಗೆ ಮಂತ್ರಿಗಿರಿ ಕೊಡಲಿಲ್ಲ, ಆದರೆ, ಮಾನ್ಯ ಜೆ.ಹೆಚ್.ಪಟೇಲ್‌ರವರು ಕೊಟ್ಟಿದ್ದಾರೆಂಬ ಮಾತನ್ನು ನನ್ನ ಹತ್ತಿರ ಹೇಳಿದ್ದರು. ಶ್ರೀಯುತರು ಧೀಮಂತ ರಾಜಕಾರಣಿಯಾಗಿದ್ದರು. ಕೆ.ಎಂ.ಕೃಷ್ಣಾರೆಡ್ಡಿಯವರು ವಕೀಲರಾಗಿದ್ದಾಗಲೂ ಸಹ ಅವರ ಜೊತೆಯಲ್ಲಿ ಕೆಲಸ ಮಾಡುವಂಥ ಅವಕಾಶ ನನಗೆ ಸಿಕ್ಕಿತ್ತು. ಶ್ರೀಯುತರು 1999ರಲ್ಲಿ ವಿಧಾನ ಸಭೆ ಚುನಾವಣೆಯಲ್ಲಿ ಸೋತಾಗ ಅದರ ಬಗ್ಗೆ ಯಾವತ್ತೂ ಕೂಡ ಯೋಚನೆ ಮಾಡಿರಲಿಲ್ಲ. ಇವತ್ತಿನ ದಿವಸ ಶ್ರೀ ಕೆ.ಎಂ.ಕೃಷ್ಣಾರೆಡ್ಡಿಯವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಹಾಗೆಯೇ, ಶಿಡ್ಲಘಟ್ಟ ತಾಲ್ಲೂಕಿನ ಶ್ರೀ ಎಸ್.ಮುನಿಶ್ಯಾಮಪ್ಪನವರ ಜೊತೆಯಲ್ಲಿ ನಾನು ಸಹ ಕೆಲಸ ಮಾಡಿದ್ದೇನೆ. ಶ್ರೀಯುತರು ಒಳ್ಳೆಯ ಮೇಧಾವಿಯಾಗಿದ್ದರು. ಹಾಗೆಯೇ ಜನರ ಪರ ಒಳ್ಳೆಯ ಕೆಲಸ ಮಾಡಿರುವಂಥ ಒಬ್ಬ ಬುದ್ಧಿ ಜೀವಿ ಕೂಡ ಆಗಿದ್ದರು. ಶ್ರೀ ಎಸ್.ಮುನಿಶ್ಯಾಮಪ್ಪನವರ ಆತ್ಮಕ್ಕೂ ಸಹ ಶಾಂತಿಯನ್ನು ಕೋರಿ ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಪಿ. ಹರೀಶ್ (ಹರಿಹರ):– ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೋರುತ್ತಾ ಮಾಜಿ ರಾಜ್ಯಪಾಲರಾದ

ಶ್ರೀ ಗೋವಿಂದ ನಾರಾಯಣ ಮತ್ತು ಶ್ರೀ ಎಂ.ಗಂಗಣ್ಣ ಭೀಮಪ್ಪ ಮತ್ತು ನಮ್ಮ ರಾಜ್ಯಕ್ಕೆ ಸಮಾಜ ಸೇವೆ ಮಾಡಿರುವಂಥ ಅನೇಕ ಗಣ್ಯರನ್ನು ಕಳೆದುಕೊಂಡಂಥ ಸಂದರ್ಭವಾಗಿದೆ. ದಿವಂಗತ ಕೆ.ಜಿ.ಮಹೇಶ್ವರಪ್ಪನವರು ಮಧ್ಯ ಕರ್ನಾಟಕದ ದಾವಣಗೆರೆ ಜಿಲ್ಲೆಯವರಾಗಿದ್ದು, ಶ್ರೀಯುತರು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾಗಿ ಸಕ್ಕರೆ ಕಾರ್ಖಾನೆಯ ಶ್ರೇಯಸ್ಸು ಮತ್ತು ಕಬ್ಬು ಬೆಳೆಗಾರರ ಪರವಾಗಿ ಅನೇಕ ವರ್ಷಗಳ ಕಾಲ ಹೋರಾಟವನ್ನು ಮಾಡಿ ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಸದಸ್ಯರಾಗಿ, ಮುಖ್ಯ ಸಚೇತಕರಾಗಿ ಮತ್ತು ರಾಜ್ಯ ಸಭಾ ಸದಸ್ಯರಾಗಿ ರೈತರ ಪರವಾಗಿ ಅನೇಕ ಸಾರಿ ಸರ್ಕಾರದಲ್ಲಿ ಧ್ವನಿ ಎತ್ತಿದಂಥ ಶ್ರೀಯುತರು. ಮಧ್ಯ ಕರ್ನಾಟಕ ಭಾಗದ ರೈತರ ಪರವಾಗಿ ಧ್ವನಿ ಎತ್ತುತ್ತಿದ್ದಂಥ ಒಬ್ಬ ಹಿರಿಯರನ್ನು ಈ ದಿನ ನಾವು ಕಳೆದುಕೊಂಡಿದ್ದೇವೆ. ಹಾಗೆಯೇ ಇವರ ಜೊತೆಗೆ ಶ್ರೀ ಬಿ.ವಿ.ಕಕ್ಕಿಲ್ಲಾಯರವರು ಶ್ರೀಮಂತ ಕುಟುಂಬದಿಂದ ಬಂದವರಾಗಿದ್ದರು ಕೂಡ ಕರ್ನಾಟಕ ರಾಜ್ಯದ ಕಾರ್ಮಿಕ ಸಂಘಟನೆಗಾಗಿ ಶ್ರಮ ಜೀವಿಗಳ ಪರವಾಗಿ ವಿಧಾನ ಸಭೆಯಲ್ಲಿ ಮತ್ತು ಹೊರಗಡೆ ಧ್ವನಿ ಎತ್ತಿದಂಥ ಒಬ್ಬ ಮಹಾನ್ ನಾಯಕರಾಗಿದ್ದರು. ಇವರೆಲ್ಲರ ಅಗಲಿಕೆಯಿಂದ ನಮ್ಮ ರಾಜ್ಯಕ್ಕೆ ಅದರಲ್ಲೂ ರೈತರು ಮತ್ತು ಶ್ರಮಿತ ವರ್ಗದವರಿಗೆ ತುಂಬಲಾರದ ನಷ್ಟವಾಗಿದೆ. ಶ್ರೀಯುತರ ಆತ್ಮಕ್ಕೆ ನಾನೂ ಕೂಡ ಶಾಂತಿಯನ್ನು ಕೋರುತ್ತಾ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಇಂದಿನ ಸಂತಾಪ ಸೂಚನೆಯ ಜೊತೆಗೆ ಈಗ ತಾನೆ ಪ್ರಸ್ತಾಪಗೊಂಡಂತೆ ಹಿಂದಿ ಚಲನ ಚಿತ್ರರಂಗದ ಖ್ಯಾತ ನಟರಾದ ಶ್ರೀ ರಾಜೇಶ್‌ಖನ್ನಾರವರಿಗೂ ಸಹ ಸಂತಾಪ ಸೂಚನಾ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಹಾಗೆಯೇ, ನಮ್ಮ ಉಚ್ಚನ್ಯಾಯಾಲಯದ ನ್ಯಾಯ ಮೂರ್ತಿಗಳಾಗಿದಂಥ ಜಸ್ಟೀಸ್ ಕೆ.ಗೋವಿಂದರಾಜುಲುರವರು ಅಪಘಾತದಲ್ಲಿ ನಿಧನರಾಗಿದ್ದಾರೆ. ಶ್ರೀಯುತರಿಗೂ ಕೂಡ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಲಾಗುತ್ತದೆ. ಶ್ರೀ ಕೆ.ಗೋವಿಂದರಾಜುಲುರವರು ನಮಗೆ ಬಹಳ ಹತ್ತಿರದವರಾಗಿದ್ದರು. ನಮ್ಮ ಜಿಲ್ಲೆಯಲ್ಲಿ ನಾಲ್ಕು ವರ್ಷಗಳ ಕಾಲ District and Session Judge ಆಗಿ ಕೆಲಸ ಮಾಡಿದ್ದರು. ಅವರ ಒಂದು ವಿಶೇಷ ಗುಣ ಏನೆಂದರೆ, ಸಾಕ್ಷಿಗಳ cross examine ಮಾಡುವಾಗ interfere ಆಗುತ್ತಿರಲಿಲ್ಲ. ಎಷ್ಟು ಹೊತ್ತು ಬೇಕಾದರು ಕೇಳಬಹುದಿತ್ತು. ಮಧ್ಯದಲ್ಲಿ ನಾನು ಕೇಳಿದರೆ ಕೇಳುವಂಥ ದಾಟಿ ತಪ್ಪುತ್ತದೆ ಎಂದು ಮಧ್ಯದಲ್ಲಿ interfere ಆಗದೆ

ನಮಗೆ ಬಹಳಷ್ಟು ಸಹಕಾರ ಕೊಟ್ಟುಕೊಂಡು ಬಹಳ ಆತ್ಮೀಯರಾಗಿದ್ದಂಥ ಶ್ರೀಯುತರು ನಮ್ಮಿಂದ ಅಗಲಿದ್ದಾರೆ. ಹಾಗಾಗಿ ಮೃತರ ಆತ್ಮಕ್ಕೆ ಗೌರವವನ್ನು ಸಲ್ಲಿಸಿ ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

(ಈ ಹಂತದಲ್ಲಿ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಲಾಯಿತು)

ಅಧ್ಯಕ್ಷರು: ಈ ಸಂತಾಪ ಸೂಚನೆಯನ್ನು ಮೃತರ ಕುಟುಂಬಕ್ಕೆ ಕಳುಹಿಸಿ ಕೊಡಲಾಗುವುದು.

2. ಕಾರ್ಯದರ್ಶಿ ವರದಿ:

ಕಾರ್ಯದರ್ಶಿ: ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.